ಮುಂಡಕೋಪನಿಷತ್

ಸ್ವಾಮಿ ಆದಿದೇವಾನಂದ

ಶ್ರೀರಾಮಕೃಷ್ಣಾಶ್ರಮ : ಯಾದವಗಿರಿ : ಮೈಸೂರು ೨೦

ಮುಂಡಕೋಪನಿಷತ್

ಮೂಲ ಪ್ರತಿಪದಾರ್ಥ
ತಾತ್ಪರ್ಯ ಟಿಪ್ಪಣಿಗಳೊಡನೆ

ಸ್ವಾಮಿ ಆದಿದೇವಾನಂದ

ಶ್ರೀರಾಮಕೃಷ್ಣಾಶ್ರಮ : ಮೈಸೂರು ೨೦

ಪ್ರಕಾಶಕರು :
ಅಧ್ಯಕ್ಷರು
ಶ್ರೀರಾಮಕೃಷ್ಣಾಶ್ರಮ
ಯಾದವಗಿರಿ, ಮೈಸೂರು ೨೦

ಮೊದಲನೆಯ ಮುದ್ರಣ ೧೯೫೭
ಎರಡನೆಯ ಮುದ್ರಣ ೧೯೬೯
ಮೂರನೆಯ ಮುದ್ರಣ ೧೯೭೬
ನಾಲ್ಕನೆಯ ಮುದ್ರಣ ೧೯೮೩
ಐದನೆಯ ಮುದ್ರಣ ೧೯೯೩

ಎಲ್ಲ ಹಕ್ಕುಗಳೂ ಪ್ರಕಾಶಕರಿಗೆ ಸೇರಿವೆ

ಮುದ್ರಕರು : ಜಿ. ಎಚ್. ಕೃಷ್ಣಮೂರ್ತಿ
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು

ಪ್ರಸ್ತಾವನೆ

ಮುಂಡಕೋಪನಿಷತ್ತು ಅಥರ್ವವೇದಕ್ಕೆ ಸೇರಿದೆ. ರಮಣೀಯವಾದ ಶೈಲಿ, ಶಬ್ದ ಗಾಂಭೀರ್ಯ, ಲಲಿತವಾದ ಛಂದಸ್ಸುಗಳು, ಅತ್ಯುನ್ನತವಾದ ಭಾವಗಳು ಇವೇ ಮೊದಲಾದ ಗುಣಗಳ ಹೊಂದಿಕೆಯಿಂದ ಈ ಉಪನಿಷತ್ತಿನ ಪ್ರತಿಯೊಂದು ಮಂತ್ರವೂ ಓದಲು ಮನೋಹರವಾಗಿದೆ. 'ಮುಂಡ' ಎಂಬ ಪದದಿಂದ ಇದಕ್ಕೆ 'ಮುಂಡಕೋಪನಿಷತ್' ಎಂಬ ಹೆಸರು ಬಂದಿರಬಹುದು. ಕ್ಷೌರ ಮಾಡಿಸಿಕೊಂಡ ತಲೆಗೆ ಅಥವಾ ಕ್ಷೌರಕ್ಕೆ ಮುಂಡವೆಂದು ಹೆಸರು. ಈ ಉಪನಿಷತ್ತಿನಲ್ಲಿ ಪ್ರತಿಪಾದಿಸಿರುವ ತತ್ತ್ವವನ್ನು ತಿಳಿದುಕೊಂಡರೆ ಅವಿದ್ಯೆಯಿಂದ ಉಂಟಾದ ಭ್ರಮೆಗಳೆಲ್ಲವೂ ಮುಂಡನಕ್ರಿಯೆಯಂತೆ ಕತ್ತರಿಸಲ್ಪಡುತ್ತವೆ : ಇದೇ ಮುಂಡನರೂಪಕದ ಅರ್ಥ. ಅಥವಾ ಸಂನ್ಯಾಸಿಗಳೇ ಈ ಉಪನಿಷತ್ತಿನ ಅಧ್ಯಯನಕ್ಕೆ ವಿಶೇಷ ಅಧಿಕಾರಿಗಳಾಗಿರುವುದರಿಂದ ಮುಂಡಕವೆಂಬ ಹೆಸರು ಬಂದಿರಬಹುದು. ಇದರ ಮೂರು ಅಧ್ಯಾಯಗಳಿಗೆ ಮುಂಡಕಗಳೆಂದು ಹೆಸರು. ಒಂದೊಂದು ಮುಂಡಕದಲ್ಲಿಯೂ ಎರಡೆರಡು ಖಂಡಗಳಿದ್ದು ಒಟ್ಟು ೬೪ ಮಂತ್ರಗಳಿವೆ. ಬ್ರಹ್ಮಾ, ಅಥರ್ವ ಇವರೇ ಮೊದಲಾದವರಿಂದ ಸಾಂಪ್ರದಾಯಿಕವಾಗಿ ಬಂದ ಬ್ರಹ್ಮವಿದ್ಯೆಯನ್ನು ಆಚಾರ್ಯನಾದ ಅಂಗಿರಸ್ಸು ಮಹಾಗೃಹಸ್ಥನಾದ ಶೌನಕನಿಗೆ ಉಪದೇಶ ಮಾಡುತ್ತಾನೆ.

ಎಲ್ಲ ವಿದ್ಯೆಗಳನ್ನೂ ಎರಡು ಭಾಗಗಳಾಗಿ ವಿಂಗಡಿಸಿರುವುದು ಈ ಉಪನಿಷತ್ತಿನ ಮೊದಲನೆಯ ಮುಖ್ಯಾಂಶ : ಪರಾವಿದ್ಯೆ ಮತ್ತು ಅಪರಾವಿದ್ಯೆ : ಬ್ರಹ್ಮಜ್ಞಾನವು ಪರಾವಿದ್ಯೆ, ಬ್ರಹ್ಮೇತರ ಎಂದರೆ ಲೌಕಿಕಜ್ಞಾನವು ಅಪರಾವಿದ್ಯೆ. ಅಪರಾವಿದ್ಯೆಯು ಜಗತ್ತಿಗೆ ಸಂಬಂಧಪಟ್ಟ ಸಮಸ್ತ ಜ್ಞಾನವಿಶೇಷಗಳನ್ನು ವ್ಯಾಪಿಸಿಕೊಂಡಿದ್ದರೂ ಅದು ಅಪೂರ್ಣ, ತುಂಡುತುಂಡಾದುದು. ಗೀತೆಯು ಹೇಳುವಂತೆ ಅದು 'ಬಹುಶಾಖೆಯುಳ್ಳ ಅನಂತವಾದ' ಅವ್ಯವಸಾಯಾತ್ಮಕ ಜ್ಞಾನ. ಇದು ಪರಾವಿದ್ಯೆಗೆ ಹಂತವಾಗಿದ್ದರೂ ಇದರಿಂದ ನೇರಾಗಿ ತತ್ತ್ವಜ್ಞಾನವುಂಟಾಗುವುದಿಲ್ಲ. ಪರಾವಿದ್ಯೆಯು ಭಿನ್ನ ಭಿನ್ನ ವಸ್ತುಗಳ ವಿಶೇಷರೂಪಗಳನ್ನು ತಿಳಿಸದಿದ್ದರೂ ಸರ್ವವಸ್ತುಗಳಿಗೆ ಆಧಾರವಾದ ಮೂಲತತ್ತ್ವವನ್ನು ತಿಳಿಸುತ್ತದೆ. ಚಿನ್ನದ ಸ್ವರೂಪವನ್ನು ತಿಳಿದುಕೊಂಡಿದ್ದರೆ ಅದರಿಂದ ಮಾಡಿದ ಆಭರಣವೇ ಮೊದಲಾದ ಸಮಸ್ತ ವಸ್ತುಗಳನ್ನು ತಿಳಿದುಕೊಳ್ಳಬಹುದು.

ಎರಡನೆಯ ಮುಖ್ಯಾಂಶವೇನೆಂದರೆ ಸರ್ವಕರ್ಮಸಂನ್ಯಾಸದ ಪ್ರಶಂಸೆ. ಸಾಧಕನು ಅಷ್ಟಾಂಗಯೋಗದಲ್ಲಿ ಸಿದ್ಧಿಯನ್ನು ಪಡೆದಿರಬಹುದು, ಇಷ್ಟಾಪೂರ್ತಗಳಲ್ಲಿ ದಕ್ಷನಾಗಿರಬಹುದು ; ಇವುಗಳಿಂದ ಅವಿದ್ಯೆಯು ತೊಲಗುವುದಿಲ್ಲ. ಆತ್ಯಂತಿಕ ಮೋಕ್ಷವಾಗಬೇಕಾದರೆ ಬ್ರಹ್ಮಜ್ಞಾನವು ಆವಶ್ಯಕ. ಬರಿಯ ಜ್ಞಾನಕ್ಕೆ ಎಲ್ಲ ಆಶ್ರಮಿಗಳೂ ಅಧಿಕಾರಿಗಳಾದರೂ ಸಂನ್ಯಾಸನಿಷ್ಠೆಯುಳ್ಳ ಬ್ರಹ್ಮವಿದ್ಯೆಯು ಸರಿಯಾದ ಸಾಧನ. 'ಭೈಕ್ಷ್ಯಚರ್ಯಾಂ ಚರಂತಃ' (೧, ೨, ೧೧). 'ಸಂನ್ಯಾಸಯೋಗಾತ್' (೩,೨,೬) ಎಂದು ಈ

ಉಪನಿಷತ್ತೇ ಹೇಳುತ್ತದೆ. ಶ್ರೀಶಂಕರಾಚಾರ್ಯರು 'ತಪಸೋವಾಪ್ಯಲಿಂಗಾತ್' (೩.೨.೪) ಎಂಬುದರ ಮೇಲೆ ವ್ಯಾಖ್ಯಾನ ಮಾಡುವಾಗ 'ಲಿಂಗಂ ಸಂನ್ಯಾಸಃ' ಎಂದು ಹೇಳಿದ್ದಾರೆ : ಸಂನ್ಯಾಸವಿಲ್ಲದ ಜ್ಞಾನದಿಂದ ಆತ್ಮನು ಲಭ್ಯನಲ್ಲ ಎಂದು ಅರ್ಥ. ಕಾಮನೆಗಳೇ ಜೀವನ ಸಂಸಾರಕ್ಕೆ ಕಾರಣ. ಪರ್ಯಾಪ್ತಕಾಮನಿಗೆ ಕಾಮಗಳು ಇಲ್ಲಿಯೇ ಲಯವಾಗುತ್ತವೆ (೩.೨.೨).

ಮೂರನೆಯ ಮುಖ್ಯವಾದ ಅಂಶವೇನೆಂದರೆ ಈ ಉಪನಿಷತ್ತಿನಲ್ಲಿ ಪ್ರತಿಪಾದಿತವಾಗಿರುವ ಯೋಗ. ಪ್ರಣವದ ಮೂಲಕ ಮಾಡುವ ಧ್ಯಾನವನ್ನು ಧನೂರೂಪಕದಿಂದ ಬಹಳ ಸೊಗಸಾಗಿ ಹೇಳಿದೆ. ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಧನುಸ್ಸೇ ಪ್ರಣವ : ಉಪಾಸನೆಯಿಂದ ಹರಿತವಾದ ಬಾಣವೇ ಜೀವಾತ್ಮ ; ಬ್ರಹ್ಮವೇ ಲಕ್ಷ್ಯ ಅಥವಾ ಗುರಿ. ಇಂದ್ರಿಯಗಳನ್ನು ವಿಷಯಗಳಿಂದ ಹಿಂತಿರುಗಿಸಿ ತದ್ಭಾವಗತವಾದ ಚಿತ್ತದಿಂದ ಅಪ್ರಮತ್ತನಾಗಿ ಲಕ್ಷ್ಯವನ್ನು ಹೊಡೆದು ಅದರಲ್ಲಿ ತನ್ಮಯನಾಗಬೇಕು.

ಇನ್ನೊಂದು ಮುಖ್ಯಾಂಶವೇನೆಂದರೆ ಯುಕ್ತಾತ್ಮರು ಬ್ರಹ್ಮವನ್ನು ಪ್ರವೇಶಿಸುವ ಕ್ರಮ ಮತ್ತು ಮುಕ್ತಿಯ ಲಕ್ಷಣ. ಅವರು 'ಎಲ್ಲವನ್ನೂ' ಪ್ರವೇಶಿಸುವರು. ಸರ್ವಮೇವ ಆವಿಶಂತಿ (೩.೨.೫) ; ಘಟವು ಒಡೆದಾಗ ಅದರ 'ಆಕಾಶವು' ಮಹಾಕಾಶದೊಂದಿಗೆ ಒಂದಾಗುವಂತೆ ; ಎಂದರೆ ಭೇದಕ್ಕೆ ಕಾರಣವಾದ ಉಪಾಧಿ ನಾಶವಾಗುತ್ತದೆ. ಮೋಕ್ಷ ಕಾಲದಲ್ಲಿ, ಶರೀರಕ್ಕೆ ಕಾರಣವಾಗಿದ್ದ ಹದಿನೈದು ಕಲೆಗಳೂ ತಮ್ಮ ತಮ್ಮ ಕಾರಣಗಳನ್ನು ಸೇರುತ್ತವೆ. ಜೀವಾತ್ಮನೂ ಕೂಡ ಅವ್ಯಯವಾದ ಬ್ರಹ್ಮದಲ್ಲಿ ಒಂದಾಗುವನು (೩, ೨, ೭). ನದಿಗಳು ಸಮುದ್ರವನ್ನು ಸೇರಿ ನಾಮರೂಪಗಳನ್ನು ಬಿಡುವಂತೆ, ಜ್ಞಾನಿಯೂ ಕೂಡ ಪರಾತ್ಪರನಾದ ದಿವ್ಯಪುರುಷನನ್ನು ಹೊಂದಿ ಅವಿದ್ಯೆಯಿಂದಾಗಿರುವ ನಾಮರೂಪಗಳನ್ನು ತ್ಯಾಗಮಾಡುವನು (೩.೨.೮). 'ಬ್ರಹ್ಮವನ್ನು ತಿಳಿದುಕೊಳ್ಳುವವನು ಬ್ರಹ್ಮನಾಗುವನು...ಇವನು ಶೋಕವನ್ನು ದಾಟುತ್ತಾನೆ. ಪಾಪವನ್ನು ದಾಟುತ್ತಾನೆ. ಹೃದಯಗ್ರಂಥಿಗಳಿಂದ ಬಿಡುಗಡೆಹೊಂದಿ ಅಮೃತನಾಗುವನು' (೩.೨.೯). ಇದು ಈ ಉಪನಿಷತ್ತಿನ ಆದೇಶ, ಉಪದೇಶ.

ಸ್ವಾಮಿ ಆದಿದೇವಾನಂದ

ಶ್ರೀರಾಮಕೃಷ್ಣಾಶ್ರಮ
ಮಂಗಳೂರು

ಶಾಂತಿಪಾಠ

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ
ವ್ಯಶೇಮ ದೇವಹಿತಂ ಯದಾಯುಃ ॥

ಓಂ ಶಾಂತಿಃ ಶಾಂತಿಃ ಶಾಂತಿಃ

ದೇವಾಃ=ಹೇ ದೇವತೆಗಳೆ ಕರ್ಣೇಭಿಃ=ಕಿವಿಗಳಿಂದ ಭದ್ರಂ=ಮಂಗಳಕರವಾದುದನ್ನು ಶೃಣುಯಾಮ=ಕೇಳುವ; ಯಜತ್ರಾಃ=ಹೇ ಪೂಜಾರ್ಹರೇ, ಅಕ್ಷಭಿಃ=ಕಣ್ಣುಗಳಿಂದ ಭದ್ರಂ=ಪವಿತ್ರವಾದುದನ್ನು ಪಶ್ಯೇಮ=ನೋಡುವ; ಸ್ಥಿರೈಃ=ದೃಢವಾದ ಅಂಗೈಃ=ಅವಯವಗಳಿಂದ [ಚ=ಮತ್ತು] ತನೂಭಿಃ=ಶರೀರಗಳಿಂದ [ಯುಕ್ತಾಃ ವಯಂ=ಕೂಡಿದ ನಾವು] ತುಷ್ಟುವಾಂಸಃ=ಸ್ತುತಿಸುವವರಾಗಿ ದೇವಹಿತಂ ಯತ್ ಆಯುಃ=ದೇವನಿಂದ ಯಾವ ಆಯುಸ್ಸು ವಿಧಿಸಲ್ಪಟ್ಟಿದೆಯೊ [ತತ್=ಅದನ್ನು] ವ್ಯಶೇಮ=ಹೊಂದುವ.

ಹೇ ದೇವತೆಗಳೆ, ಮಂಗಳವಾದುದನ್ನು ಕಿವಿಗಳಿಂದ ಕೇಳುವ ; ಹೇ ಪೂಜಾರ್ಹರೇ, ಪವಿತ್ರವಾದುದನ್ನು ಕಣ್ಣುಗಳಿಂದ ನೋಡುವ ; ದೃಢವಾದ ಅವಯವಗಳಿಂದಲೂ ಮತ್ತು ಶರೀರಗಳಿಂದಲೂ ಕೂಡಿ (ನಿಮ್ಮನ್ನು) ಸ್ತುತಿಸುವವರಾಗಿ ದೇವನಿಂದ ವಿಧಿಸಲ್ಪಟ್ಟ (ಪೂರ್ಣವಾದ) ಆಯುಸ್ಸನ್ನು ಹೊಂದುವ.

ಓಂ ಶಾಂತಿಃ ಶಾಂತಿಃ ಶಾಂತಿಃ

ಮುಂಡಕೋಪನಿಷತ್

ಮೊದಲನೆಯ ಮುಂಡಕ

ಮೊದಲನೆಯ ಖಂಡ

ಓಂ ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ
ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ ।
ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾ-
ಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ ॥ ೧ ॥

ವಿಶ್ವಸ್ಯ=ವಿಶ್ವದ ಕರ್ತಾ=ಕರ್ತೃವೂ ಭುವನಸ್ಯ=[ಉತ್ಪನ್ನವಾದ] ವಿಶ್ವದ ಗೋಪ್ತಾ=ಪಾಲಿಸುವವನೂ [ಆದ] ಬ್ರಹ್ಮಾ=ಬ್ರಹ್ಮನು ದೇವಾನಾಂ=ದೇವತೆಗಳಿಗೆ ಪ್ರಥಮಃ=ಮೊದಲನೆಯವನಾಗಿ ಸಂಬಭೂವ=ಅಭಿವ್ಯಕ್ತನಾದನು. ಸಃ=ಅವನು ಸರ್ವವಿದ್ಯಾಪ್ರತಿಷ್ಠಾಂ=ಸರ್ವವಿದ್ಯೆಗಳಿಗೂ ಆಶ್ರಯವಾಗಿರುವ ಬ್ರಹ್ಮವಿದ್ಯಾಂ=ಬ್ರಹ್ಮವಿದ್ಯೆಯನ್ನು ಜ್ಯೇಷ್ಠಪುತ್ರಾಯ=ಜ್ಯೇಷ್ಠನಾದ ಅಥರ್ವಾಯ=ಅಥರ್ವನಿಗೆ ಪ್ರಾಹ=ಉಪದೇಶಿಸಿದನು.

೧. ವಿಶ್ವದ ಕರ್ತೃವೂ ಪಾಲಕನೂ ಆದ ಬ್ರಹ್ಮನು[1] ದೇವತೆಗಳಿಗೆಲ್ಲ[2] ಮೊದಲನೆಯವನಾಗಿ[3] ಅಭಿವ್ಯಕ್ತನಾದನು. ಅವನು ಸರ್ವವಿದ್ಯೆಗಳಿಗೂ ಆಶ್ರಯವಾಗಿರುವ[4] ಬ್ರಹ್ಮವಿದ್ಯೆಯನ್ನು ಜ್ಯೇಷ್ಠಪುತ್ರನಾದ ಅಥರ್ವನಿಗೆ ಉಪದೇಶಿಸಿದನು.

[[1] ಎಲ್ಲರಿಗಿಂತಲೂ ಹಿರಿಯವನಾದುದರಿಂದ ಮತ್ತು ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯ ಇವುಗಳಲ್ಲಿ ಎಲ್ಲರನ್ನೂ ಮೀರಿರುವುದರಿಂದ ಇವನು ಬ್ರಹ್ಮನು.

[2] ಪ್ರಕಾಶಮಾನರಾದ ಇಂದ್ರಾದಿಗಳಿಗೆ.

[3] ಗುಣಗಳಿಂದ ಪ್ರಧಾನನಾಗಿ ಅಥವಾ ಮೊದಲೇ.

[4] ಸರ್ವವಿದ್ಯೆಗಳೂ ಅಭಿವ್ಯಕ್ತವಾಗಲು ಕಾರಣವಾದುದರಿಂದ : ಅಥವಾ ಸರ್ವವಿದ್ಯೆಗಳಿಗೂ ವೇದ್ಯವಾಗಿರುವ ವಸ್ತುವು ಇದರಿಂದಲೇ ತಿಳಿದುಬರುವುದರಿಂದ.]

ಅಥರ್ವಣೇ ಯಾಂ ಪ್ರವದೇತ ಬ್ರಹ್ಮಾ-
ಥರ್ವಾ ತಾಂ ಪುರೋವಾಚಾಂಗಿರೇ ಬ್ರಹ್ಮವಿದ್ಯಾಮ್ ।
ಸ ಭಾರದ್ವಾಜಾಯ ಸತ್ಯವಹಾಯ ಪ್ರಾಹ
ಭಾರದ್ವಾಜೋಽಂಗಿರಸೇ ಪರಾವರಾಮ್ ॥ ೨ ॥

ಬ್ರಹ್ಮಾ=ಬ್ರಹ್ಮನು ಯಾಂ ಬ್ರಹ್ಮವಿದ್ಯಾಂ=ಯಾವ ಬ್ರಹ್ಮವಿದ್ಯೆಯನ್ನು ಅಥರ್ವಣೇ=ಅಥರ್ವನಿಗೆ ಪ್ರವದೇತ=ಹೇಳಿದನೋ ತಾಂ=ಅದನ್ನು ಪುರಾ=ಪೂರ್ವದಲ್ಲಿ ಅಂಗಿರೇ=ಅಂಗಿರನಿಗೆ ಉವಾಚ=ಹೇಳಿದನು : ಸಃ=ಅವನು ಭಾರದ್ವಾಜಾಯ ಸತ್ಯವಹಾಯ=ಭರದ್ವಾಜಗೋತ್ರದ ಸತ್ಯವಹನಿಗೆ ಪ್ರಾಹ=ಹೇಳಿದನು : ಭಾರದ್ವಾಜಃ=ಭಾರದ್ವಾಜನು ಪರಾವರಾಂ=ಪರಾವರ (ವಿದ್ಯೆಯನ್ನು) ಅಂಗಿರಸೇ=ಅಂಗಿರಸ್ಸಿಗೆ [ಪ್ರಾಹ=ಹೇಳಿದನು.]

೨. ಯಾವ ಬ್ರಹ್ಮವಿದ್ಯೆಯನ್ನು ಬ್ರಹ್ಮನು ಅಥರ್ವನಿಗೆ ಹೇಳಿದನೊ ಅದನ್ನು ಅಥರ್ವನು ಅಂಗಿರನಿಗೆ ಹೇಳಿದನು : ಅವನು (ಅದನ್ನು) ಭರದ್ವಾಜ ಗೋತ್ರಕ್ಕೆ ಸೇರಿದ ಸತ್ಯವಹನಿಗೆ ಹೇಳಿದನು : ಆ ಪರಾವರವಿದ್ಯೆಯನ್ನು[1] ಭಾರದ್ವಾಜನು ಅಂಗಿರಸ್ಸಿಗೆ ಹೇಳಿದನು.

[[1]ಪರರಾದ ಹಿರಿಯರಿಂದ ಅವರರಾದ ಕಿರಿಯರಿಗೆ ಬಂದುದು : ಅಥವಾ ಪರಾವರವಾದ ಸರ್ವವಿದ್ಯೆಗಳನ್ನೂ ವ್ಯಾಪಿಸಿಕೊಂಡಿರುವುದು.]

ಶೌನಕೋ ಹ ವೈ ಮಹಾಶಾಲೋಽಂಗಿರಸಂ ವಿಧಿವದುಪಸನ್ನಃ ಪಪ್ರಚ್ಛ । ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ

ಮಹಾಶಾಲಃ=ಮಹಾಗೃಹಸ್ಥನಾದ ಶೌನಕಃ ಹ ವೈ=ಶೌನಕನು ಅಂಗಿರಸಂ=ಅಂಗಿರಸ್ಸನ್ನು ವಿಧಿವತ್=ವಿಧಿಪ್ರಕಾರ ಉಪಸನ್ನಃ=ಸಮೀಪಿಸಿದವನಾಗಿ ಪಪ್ರಚ್ಛ=ಪ್ರಶ್ನಿಸಿದನು—ಭಗವಃ=ಹೇ ಭಗವನ್, ಕಸ್ಮಿನ್ ನು ವಿಜ್ಞಾತೇ=ಯಾವುದನ್ನು ತಿಳಿದುಕೊಂಡರೆ ಇದಂ ಸರ್ವಂ=ಇದೆಲ್ಲವೂ ವಿಜ್ಞಾತಂ ಭವತಿ=ತಿಳಿದಂತಾಗುವುದು ? ಇತಿ=ಎಂದು.

೩. ಮಹಾಗೃಹಸ್ಥನಾದ ಶೌನಕನು[1] ಅಂಗಿರಸ್ಸನ್ನು ವಿಧಿಪ್ರಕಾರ ಸಮೀಪಿಸಿ, 'ಹೇ ಭಗವನ್, ಯಾವುದನ್ನು ತಿಳಿದುಕೊಂಡರೆ ಇದೆಲ್ಲವನ್ನು ತಿಳಿದಂತಾಗುವುದು ?'[2] ಎಂದು ಪ್ರಶ್ನಿಸಿದನು.

[[1] ಶುನಕನ ಮಗ.]

[2] ಚಿನ್ನದ ಸ್ವರೂಪವನ್ನು ಅರಿತುಕೊಂಡರೆ ಅದರ ವಿಕಾರಗಳನ್ನೆಲ್ಲ ಅರಿಯಬಹುದು: ಹಾಗೆಯೇ ಜಗತ್ತಿನ ಭೇದಕ್ಕೆಲ್ಲ ಏಕಕಾರಣವಾಗಿರುವುದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿಯಬಹುದು: ಅಂತಹ ಯಾವುದಾದರೂ ಏಕಕಾರಣ ಇದೆಯೇ?]

ತಸ್ಮೈ ಸ ಹೋವಾಚ—ದ್ವೇ ವಿದ್ಯೇ ವೇದಿತವ್ಯೇ ಇತಿ ಹ ಸ್ಮ ಯದ್ಬ್ರಹ್ಮವಿದೋ ವದಂತಿ, ಪರಾ ಚೈವಾಪರಾ ಚ ॥ ೪ ॥

ಸಃ = ಅವನು ತಸ್ಮೈ = ಅವನಿಗೆ ಉವಾಚ ಹ = ಹೇಳಿದನು—ದ್ವೇ ವಿದ್ಯೇ = ಎರಡು ವಿದ್ಯೆಗಳು ವೇದಿತವ್ಯೇ = ತಿಳಿಯತಕ್ಕವು ಇತಿ ಹಸ್ಮ ಯತ್=ಎಂಬುದನ್ನು ಬ್ರಹ್ಮವಿದಃ=ಬ್ರಹ್ಮಜ್ಞಾನಿಗಳು ವದಂತಿ = ಹೇಳುತ್ತಾರೆ: [ತೇ = ಅವು] ಪರಾ ಚ = ಪರಾವಿದ್ಯೆ ಅಪರಾ ಚ ಏವ = ಮತ್ತು ಅಪರಾವಿದ್ಯೆ.

೪. ಅಂಗಿರಸನು ಶೌನಕನಿಗೆ ಹೇಳಿದನು: ಎರಡು ವಿದ್ಯೆಗಳನ್ನು ತಿಳಿದುಕೊಳ್ಳಬೇಕು: ಹೀಗೆ ಬ್ರಹ್ಮಜ್ಞಾನಿಗಳು ಹೇಳುತ್ತಾರೆ: (ಅವು) ಪರಾವಿದ್ಯೆ[1] ಮತ್ತು ಅಪರಾವಿದ್ಯೆ.[2]

[1 ಪರಮಾತ್ಮ ವಿದ್ಯೆ.

2 ಧರ್ಮಾಧರ್ಮಗಳೆಂಬ ಸಾಧನಗಳು ಮತ್ತು ಅವುಗಳ ಫಲ ಇವುಗಳ ವಿಷಯವಾದ ವಿದ್ಯೆ.]

ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ। ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ॥ ೫ ॥

ತತ್ರ = ಅವುಗಳಲ್ಲಿ ಅಪರಾ = ಅಪರಾವಿದ್ಯೆ—ಋಗ್ವೇದಃ = ಋಗ್ವೇದ ಯಜುರ್ವೇದಃ = ಯಜುರ್ವೇದ ಸಾಮವೇದಃ = ಸಾಮವೇದ ಅಥರ್ವವೇದಃ = ಅಥರ್ವವೇದ ಶಿಕ್ಷಾ = ಶಿಕ್ಷಾ ಕಲ್ಪಃ = ಕಲ್ಪ ವ್ಯಾಕರಣಂ = ವ್ಯಾಕರಣ ನಿರುಕ್ತಂ=ನಿರುಕ್ತ ಛಂದಃ = ಛಂದಸ್ಸು ಜ್ಯೋತಿಷಂ = ಜ್ಯೋತಿಷ ಇತಿ = ಎಂದು; ಅಥ = ಈಗ ಪರಾ = ಪರಾವಿದ್ಯೆ—ಯಯಾ = ಯಾವುದರಿಂದ ತತ್ = ಆ ಅಕ್ಷರಂ = ಅಕ್ಷರವು ಅಧಿಗಮ್ಯತೇ = ಹೊಂದಲ್ಪಡುತ್ತದೆಯೋ.

೫. ಅವುಗಳಲ್ಲಿ ಅಪರಾವಿದ್ಯೆ (ಯಾವುದೆಂದರೆ)—ಋಗ್ವೇದ ಯಜುರ್ವೇದ ಸಾಮವೇದ ಅಥರ್ವವೇದ ಶಿಕ್ಷಾ ಕಲ್ಪ ವ್ಯಾಕರಣ ನಿರುಕ್ತ ಛಂದಸ್ಸು ಮತ್ತು ಜ್ಯೋತಿಷ್ಯ; ಈಗ ಪರಾವಿದ್ಯೆ–ಯಾವುದರಿಂದ ಆ ಅಕ್ಷರವು ಹೊಂದಲ್ಪಡುತ್ತದೆಯೋ (ಅದು ಪರಾವಿದ್ಯೆ).

ಯತ್ ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣ-
ಮಚಕ್ಷುಃಶ್ರೋತ್ರಂ ತದಪಾಣಿಪಾದಮ್ ।
ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ
ತದವ್ಯಯಂ ಯದ್ಭೂತಯೋನಿಂ ಪರಿಪಶ್ಯಂತಿ
ಧೀರಾಃ ॥ ೬ ॥

ಯತ್‌ತತ್ = ಯಾವ ಅದು ಅದ್ರೇಶ್ಯಂ = ಅದೃಶ್ಯವಾದುದು ಅಗ್ರಾಹ್ಯಂ = ಅಗ್ರಾಹ್ಯವಾದುದು ಅಗೋತ್ರಂ = ಗೋತ್ರವಿಲ್ಲದುದು ಅವರ್ಣಂ = ವರ್ಣವಿಲ್ಲದುದು ಅಚಕ್ಷುಃಶ್ರೋತ್ರಂ = ಚಕ್ಷುಃಶ್ರೋತ್ರಗಳು ಇಲ್ಲದುದು ; ತತ್ = ಅದು ಅಪಾಣಿಪಾದಂ=ಹಸ್ತಪಾದವಿಹೀನವಾದುದು ನಿತ್ಯಂ=ನಿತ್ಯವಾದುದು ವಿಭುಂ=ವಿಭುವಾದುದು ಸರ್ವಗತಂ = ಸರ್ವಗತವಾದುದು ಸುಸೂಕ್ಷ್ಮಂ = ಅತ್ಯಂತ ಸೂಕ್ಷ್ಮವಾದುದು ; ತತ್ = ಅದು ಅವ್ಯಯಂ=ಅವ್ಯಯವಾದುದು : ಯತ್=ಯಾವ [ಇಂತಹ] ಭೂತಯೋನಿಂ= ಭೂತಯೋನಿಯನ್ನು ಧೀರಾಃ = ವಿವೇಕಿಗಳು ಪರಿಪಶ್ಯಂತಿ = ಎಲ್ಲೆಲ್ಲಿಯೂ ನೋಡುತ್ತಾರೆ.

೬. ಅದು ಅದೃಶ್ಯವಾದುದು,[1] ಅಗ್ರಾಹ್ಯವಾದುದು.[2] ಗೋತ್ರವಿಲ್ಲದುದು,[3] ವರ್ಣವಿಲ್ಲದುದು[4] ಚಕ್ಷುಃಶ್ರೋತ್ರಗಳಿಲ್ಲದುದು. ಹಸ್ತಪಾದವಿಹೀನವಾದುದು ;[5] ಅದು ನಿತ್ಯ, ವಿಭು,[6] ಸರ್ವಗತ,[7] ಅತ್ಯಂತ ಸೂಕ್ಷ್ಮ[8] ವಸ್ತು ಅವ್ಯಯ.[9] ಇಂತಹ ಭೂತಯೋನಿಯನ್ನು[10] ಧೀರರು ಎಲ್ಲೆಲ್ಲಿಯೂ ನೋಡುತ್ತಾರೆ.[11]

[1 ಬುದ್ಧೀಂದ್ರಿಯಗಳಿಗೆ ಅತೀತವಾದುದು.

2 ಕರ್ಮೇಂದ್ರಿಯಗಳಿಗೆ ವಿಷಯವಲ್ಲದ್ದು.

3 ಮೂಲವಿಲ್ಲದುದು.

4 ಸ್ಥೂಲತ್ವ ಶುಕ್ಲತ್ವ ಮೊದಲಾದ ದ್ರವ್ಯಧರ್ಮಗಳಿಲ್ಲದುದು.

5 ಕರ್ಮೇಂದ್ರಿಯರಹಿತವಾದುದು.

6 ಬ್ರಹ್ಮನಿಂದ ಸ್ಥಾವರದ ವರೆಗೆ ಇರುವ ಪ್ರಾಣಿವಿಶೇಷಗಳಲ್ಲಿ ವಿವಿಧವಾಗಿರುವುದು.

7 ಆಕಾಶದಂತೆ ವ್ಯಾಪಕವಾಗಿರುವುದು.

8 ಶಬ್ದಾದಿ ಸ್ಥೂಲತ್ವಕ್ಕೆ ಕಾರಣವಾದ ಧರ್ಮಗಳು ಇಲ್ಲದಿರುವುದರಿಂದ.

9 ಅಂಗಗಳೂ ಗುಣಗಳೂ ಇಲ್ಲದುದರಿಂದ.

10 ಪ್ರಾಣಿಗಳ ಕಾರಣವನ್ನು.

11 ಇಂತಹ ಅಕ್ಷರವನ್ನು ಯಾವ ವಿದ್ಯೆಯಿಂದ ಹೊಂದುತ್ತಾರೆಯೊ ಅದು ಪರಾವಿದ್ಯೆ ಎಂದರ್ಥ.]

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ
ಯಥಾ ಪೃಥಿವ್ಯಾಮೋಷಧಯಃ ಸಂಭವಂತಿ।
ಯಥಾ ಸತಃ ಪುರುಷಾತ್ ಕೇಶಲೋಮಾನಿ
ತಥಾಕ್ಷರಾತ್ ಸಂಭವತೀಹ ವಿಶ್ವಮ್ ॥ ೭ ॥

ಯಥಾ = ಹೇಗೆ ಊರ್ಣನಾಭಿಃ = ಜೇಡರ ಹುಳು [ತಂತೂನ್ = ನೂಲುಗಳನ್ನು] ಸೃಜತೇ = ಹೊರಕ್ಕೆ ತಂದು ಗೃಹ್ಣತೇ ಚ = ಒಳಕ್ಕೆ ತೆಗೆದುಕೊಳ್ಳುತ್ತದೆಯೊ, ಯಥಾ= ಹೇಗೆ ಪೃಥಿವ್ಯಾಂ = ಭೂಮಿಯಲ್ಲಿ ಓಷಧಯಃ = ಸಸ್ಯಗಳು ಸಂಭವಂತಿ = ಹುಟ್ಟುತ್ತವೆಯೊ, ಯಥಾ = ಹೇಗೆ ಸತಃ ಪುರುಷಾತ್ = ಜೀವಂತನಾದ ಮನುಷ್ಯನಿಂದ ಕೇಶಲೋಮಾನಿ = ಕೇಶಲೋಮಗಳು [ಸಂಭವಂತಿ = ಬೆಳೆಯುತ್ತವೆಯೊ] ತಥಾ = ಹಾಗೆಯೇ ಇಹ = ಇಲ್ಲಿ ಅಕ್ಷರಾತ್ = ಅಕ್ಷರದಿಂದ ವಿಶ್ವಂ = ಸಮಸ್ತ ಜಗತ್ತು ಸಂಭವತಿ = ಉಂಟಾಗುತ್ತದೆ.

೭. ಹೇಗೆ ಜೇಡರ ಹುಳು (ನೂಲುಗಳನ್ನು) ಹೊರಕ್ಕೆ ತಂದು[1] ಪುನಃ ಒಳಕ್ಕೆ ತೆಗೆದುಕೊಳ್ಳುತ್ತದೆಯೊ, ಹೇಗೆ ಭೂಮಿಯಲ್ಲಿ ಸಸ್ಯಗಳು ಹುಟ್ಟುತ್ತವೆಯೊ, ಹೇಗೆ ಜೀವಂತನಾದ ಮನುಷ್ಯನಿಂದ ಕೇಶಲೋಮಗಳು ಬೆಳೆಯುತ್ತವೆಯೊ ಹಾಗೆಯೇ ಅಕ್ಷರದಿಂದ ಇಲ್ಲಿ ಸಮಸ್ತ ಜಗತ್ತು ಉಂಟಾಗುತ್ತದೆ.[2]

[ಅಕ್ಷರವು ಪ್ರಾಣಿಗಳಿಗೆ ಹೇಗೆ ಕಾರಣವಾಗಿದೆ ಎಂಬುದನ್ನು ಪ್ರಸಿದ್ಧವಾದ ದೃಷ್ಟಾಂತಗಳಿಂದ ಇಲ್ಲಿ ಹೇಳಲಾಗಿದೆ.

[1] ಬೇರೆ ಕಾರಣವನ್ನು ಬಯಸದೆ ತನ್ನ ಶರೀರದಿಂದಲೇ ಹೊರಕ್ಕೆ ತರುವಂತೆ.

[2] ಯಾವ ನಿಮಿತ್ತವನ್ನೂ ಬಯಸದ ಅಕ್ಷರದಿಂದ ಅದಕ್ಕಿಂತ ವಿಲಕ್ಷಣವೂ ಸಲಕ್ಷಣವೂ ಆದ ವಿಶ್ವವು ಸಂಸಾರಮಂಡಲದಲ್ಲಿ ಉಂಟಾಗುತ್ತದೆ.]

ತಪಸಾ ಚೀಯತೇ ಬ್ರಹ್ಮ ತತೋಽನ್ನಮಭಿಜಾಯತೇ।
ಅನ್ನಾತ್ ಪ್ರಾಣೋ ಮನಃ ಸತ್ಯಂ ಲೋಕಾಃ ಕರ್ಮಸು
ಚಾಮೃತಮ್ ॥ ೮ ॥

ಬ್ರಹ್ಮ = ಅಕ್ಷರವು ತಪಸಾ = ತಪಸ್ಸಿನಿಂದ ಚೀಯತೇ = ದೊಡ್ಡದಾಗುತ್ತದೆ; ತತಃ = ಅದರಿಂದ ಅನ್ನಂ = ಅನ್ನವು ಅಭಿಜಾಯತೇ = ಉಂಟಾಗುತ್ತದೆ; ಅನ್ನಾತ್ = ಅನ್ನದಿಂದ ಪ್ರಾಣಃ=ಪ್ರಾಣ ಮನಃ=ಮನಸ್ಸು ಸತ್ಯಂ=ಸತ್ಯ ಲೋಕಾಃ=ಲೋಕಗಳು ಕರ್ಮಸು = ಕರ್ಮಗಳಲ್ಲಿ ಅಮೃತಂ ಚ = ಅಮೃತ.

೮. ಅಕ್ಷರವು[1] ತಪಸ್ಸಿನಿಂದ[2] ದೊಡ್ಡದಾಗುತ್ತದೆ.[3] ಅದರಿಂದ[4] ಅನ್ನವು[5] ಉಂಟಾಗುತ್ತದೆ; ಅನ್ನದಿಂದ ಪ್ರಾಣ,[6] ಮನಸ್ಸು,[7] ಸತ್ಯ,[8] ಲೋಕಗಳು,[9] ಕರ್ಮಗಳಲ್ಲಿ[10] ಅಮೃತ[11] (ಇವು ಉಂಟಾಗುತ್ತವೆ).

[ಅಕ್ಷರದಿಂದ ಸೃಷ್ಟಿಯಾಗುವ ಜಗತ್ತು ಅಕಸ್ಮಾತ್ತಾಗಿ ಉಂಟಾಗುವುದಿಲ್ಲ. ಒಂದು ನಿರ್ದಿಷ್ಟಕ್ರಮದಿಂದ ಹುಟ್ಟುತ್ತದೆ.

1 ಭೂತಯೋನಿಯಾದ.

2 ಜ್ಞಾನದಿಂದ.

3 ಮೊಳೆಯುವ ಬೀಜದಂತೆ.

4 ಸೃಷ್ಟಿಸ್ಥಿತಿಸಂಹಾರಶಕ್ತಿಜ್ಞಾನಗಳಿಂದ ಕೂಡಿದ ಅಕ್ಷರದಿಂದ.

5 ಸಂಸಾರಿಗಳಿಗೆ ಸಾಧಾರಣವಾದ ಅವ್ಯಾಕೃತ.

6 ಬ್ರಹ್ಮದ ಜ್ಞಾನ ಕ್ರಿಯಾಶಕ್ತಿಗಳಿಂದ ಅಧಿಷ್ಠಿತವಾದ, ಜಗತ್ತಿಗೆ ಸಾಧಾರಣವಾದ ಅವಿದ್ಯಾ ಕಾಮಕರ್ಮಪ್ರಾಣಿಸಮೂಹಗಳ ಬೀಜದ ಅಂಕುರವಾಗಿರುವ ಜಗದಾತ್ಮನಾದ ಹಿರಣ್ಯಗರ್ಭ.

7 ಸಂಕಲ್ಪ ವಿಕಲ್ಪ ಸಂಶಯ ನಿರ್ಣಯ ಇವೇ ಮೊದಲಾದ ಲಕ್ಷಣವುಳ್ಳ ಮನಸ್ಸೆಂಬ ತತ್ತ್ವ.

8 ಸತ್ಯವೆಂಬ ಹೆಸರುಳ್ಳ ಆಕಾಶವೇ ಮೊದಲಾದ ಭೂತಪಂಚಕ.

9 ಸತ್ಯವೆಂಬ ಭೂತಪಂಚಕದಿಂದ ಅಂಡಕ್ರಮವಾಗಿ ಭೂಃ ಮೊದಲಾದ ಸಪ್ತ ಲೋಕಗಳು.

10 ಸಪ್ತಲೋಕಗಳಲ್ಲಿ ಮನುಷ್ಯಾದಿಪ್ರಾಣಿಗಳು ವರ್ಣಾಶ್ರಮಗಳ ಕ್ರಮದಿಂದ ಕರ್ಮಗಳು.

11 ಕರ್ಮದಿಂದ ಉಂಟಾಗುವ ಫಲ; ಕರ್ಮಗಳು ನಾಶವಾಗುವ ವರೆಗೆ ಅವುಗಳ ಫಲವು ನಾಶವಾಗದಿರುವುದರಿಂದ ಕರ್ಮಫಲವು ಅಮೃತವೆನಿಸುವುದು.]

ಯಃ ಸರ್ವಜ್ಞಃ ಸರ್ವವಿದ್ಯಸ್ಯ ಜ್ಞಾನಮಯಂ ತಪಃ ।
ತಸ್ಮಾದೇತದ್ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ ॥ ೯ ॥

ಯಃ = ಯಾವನು ಸರ್ವಜ್ಞಃ = ಸರ್ವಜ್ಞನೊ, ಸರ್ವವಿತ್ = ಸರ್ವವಿದನೊ, ಯಸ್ಯ ಜ್ಞಾನಮಯಂ ತಪಃ = ಯಾವನ ತಪಸ್ಸು ಜ್ಞಾನಮಯವಾಗಿರುವುದೊ ತಸ್ಮಾತ್ = ಅವನಿಂದ ಏತತ್ = ಈ ಬ್ರಹ್ಮವೂ ನಾಮ = ನಾಮವೂ ರೂಪಂ = ರೂಪವೂ ಅನ್ನಂ ಚ = ಅನ್ನವೂ ಜಾಯತೇ = ಉಂಟಾಗುತ್ತದೆ.

೯. ಯಾವನು[1] ಸರ್ವಜ್ಞನೊ,[2] ಸರ್ವವಿದನೊ,[3] ಯಾವನ ತಪಸ್ಸು ಜ್ಞಾನಮಯವಾಗಿರುವುದೊ[4] ಅವನಿಂದ ಈ ಬ್ರಹ್ಮವೂ[5] ನಾಮವೂ ರೂಪವೂ ಅನ್ನವೂ ಉಂಟಾಗುತ್ತವೆ.

[[1] ಯಾವ ಅಕ್ಷರನು.

[2] ಸಾಮಾನ್ಯವಾಗಿ ಎಲ್ಲವನ್ನೂ ಅರಿಯುವವನು.

[3] ವಿಶೇಷವಾಗಿ ಎಲ್ಲವನ್ನೂ ಅರಿಯುವವನು.

[4] ಸಾರ್ವಜ್ಞ್ಯಲಕ್ಷಣವಾದ ಜ್ಞಾನವಿಕಾರ, ಆಯಾಸರೂಪವಾದ ತಪಸ್ಸಲ್ಲ.

[5] ಕಾರ್ಯರೂಪವಾದ ಹಿರಣ್ಯಗರ್ಭ.]

ತದೇತತ್ ಸತ್ಯಂ—
ಮಂತ್ರೇಷು ಕರ್ಮಾಣಿ ಕವಯೋ ಯಾನ್ಯಪಶ್ಯಂ-
ಸ್ತಾನಿ ತ್ರೇತಾಯಾಂ ಬಹುಧಾ ಸಂತತಾನಿ।
ತಾನ್ಯಾಚರಥ ನಿಯತಂ ಸತ್ಯಕಾಮಾ
ಏಷ ವಃ ಪಂಥಾಃ ಸುಕೃತಸ್ಯ ಲೋಕೇ ॥ ೧ ॥

ತತ್ = ಆ ಏತತ್ = ಇದು ಸತ್ಯಂ = ಸತ್ಯ; ಕವಯಃ = ಕವಿಗಳು ಮಂತ್ರೇಷು = ಮಂತ್ರಗಳಲ್ಲಿ ಯಾನಿ = ಯಾವ ಕರ್ಮಾಣಿ = ಕರ್ಮಗಳನ್ನು ಅಪಶ್ಯನ್=ನೋಡಿದರೋ ತಾನಿ=ಅವು ತ್ರೇತಾಯಾಂ=ತ್ರೇತದಲ್ಲಿ ಬಹುಧಾ=ಬಹುವಿಧವಾಗಿ ಸಂತತಾನಿ=ಹರಡಿಕೊಂಡಿರುವುವು. ಸತ್ಯಕಾಮಾಃ [ಸಂತಃ] = ಸತ್ಯಕಾಮರಾಗಿ ತಾನಿ = ಅವುಗಳನ್ನು ನಿಯತಂ=ನಿತ್ಯವೂ ಆಚರಥ=ಆಚರಿಸಿ ; ಸುಕೃತಸ್ಯ=ಸುಕೃತದ ಲೋಕೇ=ಲೋಕದಲ್ಲಿ ವಃ = ನಿಮಗೆ ಏಷಃ = ಇದು ಪಂಥಾಃ = ದಾರಿ.

೧. ಆ ಇದು ಸತ್ಯ ;[1] ಕವಿಗಳು[2] ಮಂತ್ರಗಳಲ್ಲಿ[3] ಯಾವ ಕರ್ಮಗಳನ್ನು[4] ನೋಡಿದರೋ ಅವು ತ್ರೇತದಲ್ಲಿ[5] ಬಹುವಿಧವಾಗಿ ಹರಡಿಕೊಂಡಿರುವುವು. (ನೀವು) ಸತ್ಯಕಾಮರಾಗಿ[6] ಅವುಗಳನ್ನು ನಿತ್ಯವೂ ಆಚರಿಸಿ. ಸುಕೃತದ[7] ಲೋಕಕ್ಕೆ[8] ಇದು ನಿಮಗೆ ದಾರಿ.[9]

[1 ಏಕಾಂತವಾಗಿ ಪುರುಷಾರ್ಥಕ್ಕೆ ಸಾಧನವಾದುದರಿಂದ.
2 ವಸಿಷ್ಠರೇ ಮೊದಲಾದ ಮೇಧಾವಿಗಳು.
3 ಋಗ್ವೇದವೇ ಮೊದಲಾದ ಹೆಸರುಳ್ಳ.
4 ಮಂತ್ರಗಳಿಂದ ಪ್ರಕಾಶಿತವಾದ ಅಗ್ನಿಹೋತ್ರಾದಿಗಳನ್ನು.
5 ತ್ರಯೀಸಂಯೋಗಲಕ್ಷಣವುಳ್ಳ ಹೋತೃ ಅಧ್ವರ್ಯು ಉದ್ಗಾತೃ ಎಂಬ ಋತ್ವಿಕ್ಕುಗಳ ಆಶ್ರಯದಲ್ಲಿ ; ಅಥವಾ ತ್ರೇತಾಯುಗದಲ್ಲಿ.
6 ಯಥಾರ್ಥವಾದ ಕರ್ಮಫಲವನ್ನು ಇಚ್ಛಿಸುವವರಾಗಿ.
7 ನೀವೇ ಮಾಡಿದ.
8 ಕರ್ಮಫಲಕ್ಕೆ.
9 ಅವಶ್ಯವಾಗಿ ಫಲವನ್ನು ಹೊಂದುವುದಕ್ಕೆ ಸಾಧನ.]

ಯದಾ ಲೇಲಾಯತೇ ಹ್ಯರ್ಚಿಃ ಸಮಿದ್ಧೇ ಹವ್ಯವಾಹನೇ ।
ತದಾಜ್ಯಭಾಗಾವಂತರೇಣಾಹುತೀಃ ಪ್ರತಿಪಾದಯೇತ್ ॥ ೨ ॥

ಯದಾ = ಯಾವಾಗ ಸಮಿದ್ಧೇ = ಚೆನ್ನಾಗಿ ಜ್ವಲಿಸುತ್ತಿರುವ ಹವ್ಯವಾಹನೇ=ಅಗ್ನಿಯಲ್ಲಿ ಅರ್ಚಿಃ = ಉರಿಯು ಲೇಲಾಯತೇ = ಏಳುವುದೊ ತದಾ=ಆಗ ಆಜ್ಯಭಾಗೌ=ಆಜ್ಯಭಾಗಗಳ ಅಂತರೇ = ಮಧ್ಯದಲ್ಲಿ ಆಹುತೀಃ=ಆಹುತಿಗಳನ್ನು ಪ್ರತಿಪಾದಯೇತ್=ಕೊಡಬೇಕು.

೨. ಚೆನ್ನಾಗಿ ಜ್ವಲಿಸುತ್ತಿರುವ ಅಗ್ನಿಯಲ್ಲಿ ಉರಿಯು ಯಾವಾಗ ಏಳುವುದೊ ಆಗ ಆಜ್ಯಭಾಗಗಳ ಮಧ್ಯದಲ್ಲಿ[1] ಆಹುತಿಗಳನ್ನು ಕೊಡಬೇಕು

[ಅಗ್ನಿಹೋತ್ರವು ಸರ್ವಕರ್ಮಗಳಲ್ಲಿ ಮುಖ್ಯವಾದುದರಿಂದ ಅದನ್ನೇ ಮೊದಲು ಕರ್ಮ ಉಪಲಕ್ಷಣವಾಗಿ ಇಲ್ಲಿ ಹೇಳಿದೆ.

[1] ಆವಾಪಸ್ಥಾನದಲ್ಲಿ.]

ಯಸ್ಯಾಗ್ನಿಹೋತ್ರಮದರ್ಶಮಪೌರ್ಣಮಾಸ-
ಮಚಾತುರ್ಮಾಸ್ಯಮನಾಗ್ರಯಣಮತಿಥಿವರ್ಜಿತಂ ಚ ।
ಅಹುತಮವೈಶ್ವದೇವಮವಿಧಿನಾ ಹುತ-
ಮಾಸಪ್ತಮಾಂಸ್ತಸ್ಯ ಲೋಕಾನ್ ಹಿನಸ್ತಿ ॥ ೩ ॥

ಯಸ್ಯ = ಯಾವನ ಅಗ್ನಿಹೋತ್ರಂ = ಅಗ್ನಿಹೋತ್ರವು ಅದರ್ಶಂ = ದರ್ಶಕರ್ಮರಹಿತವೊ ಅಪೌರ್ಣಮಾಸಂ = ಪೌರ್ಣಮಾಸಕರ್ಮವರ್ಜಿತವೊ ಅಚಾತುರ್ಮಾಸ್ಯಂ = ಚಾತುರ್ಮಾಸ್ಯಕರ್ಮವರ್ಜಿತವೊ ಅನಾಗ್ರಯಣಂ=ಆಗ್ರಯಣರಹಿತವೊ ಅತಿಥಿ ವರ್ಜಿತಂ ಚ = ಅತಿಥಿಪೂಜನರಹಿತವೊ ಅಹುತಂ = ಆಹುತಿರಹಿತವೊ ಅವೈಶ್ವದೇವಂ = ವೈಶ್ವದೇವಕರ್ಮವರ್ಜಿತವೊ ಅವಿಧಿನಾ ಹುತಂ = ಅವಿಧಿಯಿಂದ ಹುತವಾಗಿರುವುದೊ [ಅದು] ತಸ್ಯ = ಅವನ ಆಸಪ್ತಮಾನ್ ಲೋಕಾನ್ = ಏಳನೆಯದರ ವರೆಗಿನ ಲೋಕಗಳನ್ನು ಹಿನಸ್ತಿ = ನಾಶಮಾಡುವುದು.

೩. ಯಾವನ ಅಗ್ನಿಹೋತ್ರವು ದರ್ಶ[1] ಪೌರ್ಣಮಾಸ[2] ಚಾತುರ್ಮಾಸ್ಯ[3] ಆಗ್ರಯಣ[4] ಅತಿಥಿಸತ್ಕಾರ ಆಹುತಿ ವೈಶ್ವದೇವ[5] ಇವುಗಳಿಂದ ವರ್ಜಿತವಾಗಿರುವುದೊ ಮತ್ತು ಅವಿಧಿಯಿಂದ ಹುತವಾಗಿರುವುದೊ (ಅದು) ಅವನ ಏಳು ಲೋಕಗಳನ್ನು[6] ನಾಶಮಾಡುತ್ತದೆ.[7]

[[1] ಅಮಾವಾಸ್ಯೆಯಲ್ಲಿ ಮಾಡುವ ದರ್ಶವೆಂಬ ಹೆಸರಿನ ಕರ್ಮ.

[2] ಪೂರ್ಣಿಮೆಯಲ್ಲಿ ಮಾಡಬೇಕಾದ ಕರ್ಮ.

[3] ನಾಲ್ಕು ತಿಂಗಳಿಗೆ ಒಮ್ಮೆ ಎಂದರೆ ಕಾರ್ತಿಕ ಫಾಲ್ಗುಣ ಆಷಾಢ ಮಾಸಗಳಲ್ಲಿ ಮಾಡಬೇಕಾದ ಕರ್ಮ.

[4] ಮಳೆಗಾಲದ ಕೊನೆಯಲ್ಲಿ ಹೊಸ ಅನ್ನದಿಂದ ಮಾಡಬೇಕಾದ ಕರ್ಮ.

5 ವಿಶ್ವೇದೇವತೆಗಳನ್ನುದ್ದೇಶಿಸಿ ಮಾಡುವ ಕರ್ಮ.

6 ಭೂರಾದಿಯಾಗಿ ಸತ್ಯಲೋಕದ ವರೆಗೆ; ಅಥವಾ ಹೀಗೆ ಹೇಳುವುದರ ಬದಲು ಒಕಾರವುಳ್ಳ ಪ್ರಕೃತಿಯವರು ಪುತ್ರ, ಪೌತ್ರ, ಪ್ರಪೌತ್ರ, ಮತ್ತು ಕಾಣು.

7 ಕೇವಲ ಆಹವನವೇ ಏನೂ ಕರ್ಮದಿಂದಾಗುವುದಕ್ಕೆ ಅನುಗುಣವಾದ ಫಲದ ಪ್ರಾಪ್ತಿ ಇಲ್ಲ ಎಂದರ್ಥ.]

ಕಾಲೀ ಕರಾಲೀ ಚ ಮನೋಜವಾ ಚ
ಸುಲೋಹಿತಾ ಯಾ ಚ ಸುಧೂಮ್ರವರ್ಣಾ ।
ಸ್ಫುಲಿಂಗಿನೀ ವಿಶ್ವರುಚೀ ಚ ದೇವೀ
ಲೇಲಾಯಮಾನಾ ಇತಿ ಸಪ್ತ ಜಿಹ್ವಾಃ ॥ ೪ ॥

ಕಾಲೀ, ಕರಾಲೀ ಚ, ಮನೋಜವಾ ಚ, ಸುಲೋಹಿತಾ, ಯಾ ಚ ಸುಧೂಮ್ರವರ್ಣಾ, ಸ್ಫುಲಿಂಗಿನೀ, ದೇವೀ ವಿಶ್ವರುಚೀ ಚ—ಇತಿ ಸಪ್ತ = ಹೀಗೆ ಏಳು. ಲೇಲಾಯಮಾನಾಃ = ಚಲಿಸುತ್ತಿರುವ ಜಿಹ್ವಾಃ = ನಾಲಗೆಗಳು.

೪. ಕಾಳೀ ಕರಾಳೀ ಮನೋಜವಾ ಸುಲೋಹಿತಾ ಸುಧೂಮ್ರವರ್ಣಾ ಸ್ಫುಲಿಂಗಿನೀ ದೇವಿಯಾದ ವಿಶ್ವರುಚೀ—ಇವು ಚಲಿಸುತ್ತಿರುವ ಏಳು ನಾಲಗೆಗಳು.

[ಆಹುತಿಗಳನ್ನು ತೆಗೆದುಕೊಳ್ಳುವುದಕ್ಕೆ ಲೇಲಾಯಮಾನವಾದ ಅಗ್ನಿಯ ಏಳು ನಾಲಗೆಗಳು.]

ಏತೇಷು ಯಶ್ಚರತೇ ಭ್ರಾಜಮಾನೇಷು
ಯಥಾಕಾಲಂ ಚಾಹುತಯೋ ಹ್ಯಾದದಾಯನ್ ।
ತಂ ನಯಂತ್ಯೇತಾಃ ಸೂರ್ಯಸ್ಯ ರಶ್ಮಯೋ
ಯತ್ರ ದೇವಾನಾಂ ಪತಿರೇಕೋಽಧಿವಾಸಃ ॥ ೫ ॥

ಭ್ರಾಜಮಾನೇಷು ಏತೇಷು=ದೇದೀಪ್ಯಮಾನವಾದ ಈ ಅಗ್ನಿಶಿಖೆಗಳಲ್ಲಿ ಯಃ= ಯಾವನು ಯಥಾಕಾಲಂ=ಕಾಲಕ್ಕೆ ಸರಿಯಾಗಿ ಚರತೇ=ಕರ್ಮವನ್ನು ಮಾಡುತ್ತಾನೆಯೋ ತಂ=ಅವನನ್ನು ಏತಾಃ ಆಹುತಯಃ=ಈ ಆಹುತಿಗಳು ಸೂರ್ಯಸ್ಯ= ಸೂರ್ಯನ ರಶ್ಮಯಃ [ಭೂತ್ವಾ]=ರಶ್ಮಿಗಳಾಗಿ ಆದದಾನಾಃ ನಯಂತಿ=ಕರೆದುಕೊಂಡು ಹೋಗುತ್ತವೆ. ಯತ್ರ=ಎಲ್ಲಿ ದೇವಾನಾಂ ದೇವತೆಗಳ ಏಕಃ ಪತಿಃ=ಏಕಾಧಿಪತಿಯು ಅಧಿವಾಸಃ [ಅಧಿವಸತಿ]=ವಾಸಮಾಡಿಕೊಂಡಿರುವನೋ.

೫. ದೇದೀಪ್ಯಮಾನವಾದ ಈ ಅಗ್ನಿಶಿಖೆಗಳಲ್ಲಿ ಯಾವನು ಕಾಲಕ್ಕೆ ಸರಿಯಾಗಿ ಕರ್ಮವನ್ನು ಮಾಡುತ್ತಾನೆಯೋ ಅವನನ್ನು ಈ ಆಹುತಿಗಳು ಸೂರ್ಯನ ರಶ್ಮಿಗಳಾಗಿ, ಎಲ್ಲಿ ದೇವತೆಗಳ ಏಕಾಧಿಪತಿಯು[1] ವಾಸಮಾಡಿಕೊಂಡಿರುವನೋ ಅಲ್ಲಿಗೆ ಕರೆದುಕೊಂಡು ಹೋಗುತ್ತವೆ.

[[1] ಇಂದ್ರನು.]

ಏಹ್ಯೇಹೀತಿ ತಮಾಹುತಯಃ ಸುವರ್ಚಸಃ
ಸೂರ್ಯಸ್ಯ ರಶ್ಮಿಭಿರ್ಯಜಮಾನಂ ವಹಂತಿ ।
ಪ್ರಿಯಾಂ ವಾಚಮಭಿವದಂತ್ಯೋಽರ್ಚಯಂತ್ಯ
ಏಷ ವಃ ಪುಣ್ಯಃ ಸುಕೃತೋ ಬ್ರಹ್ಮಲೋಕಃ　　॥ ೬ ॥

ಏಹಿ ಏಹಿ ಇತಿ=ಬಾ ಬಾ ಎಂದು ಆಹ್ವಾನಿಸುತ್ತಾ [ಮತ್ತು] ಏಷಃ=ಇದು. ವಃ=ನಿಮಗೆ ಪುಣ್ಯಃ=ಪುಣ್ಯವಾದ ಸುಕೃತಃ=ಸುಕೃತವಾದ ಬ್ರಹ್ಮಲೋಕಃ=ಬ್ರಹ್ಮಲೋಕವು [ಎಂದು] ಪ್ರಿಯಾಂ=ಪ್ರಿಯವಾದ ವಾಚಂ=ಮಾತನ್ನು ಅಭಿವದಂತ್ಯಃ=ಆಡುತ್ತ ಅರ್ಚಯಂತ್ಯಃ=ಅರ್ಚಿಸುತ್ತ ಸುವರ್ಚಸಃ=ದೀಪ್ಯಮಾನವಾದ ಆಹುತಯಃ=ಆಹುತಿಗಳು ತಂ ಯಜಮಾನಂ=ಆ ಯಜಮಾನನನ್ನು ಸೂರ್ಯಸ್ಯ=ಸೂರ್ಯನ ರಶ್ಮಿಭಿಃ=ರಶ್ಮಿಗಳಿಂದ ವಹಂತಿ=ಒಯ್ಯುತ್ತವೆ.

೬. 'ಬಾ ಬಾ' ಎಂದು ಆಹ್ವಾನಿಸುತ್ತ, 'ಇದು ನಿಮಗೆ ಪುಣ್ಯವೂ ಸುಕೃತವೂ ಆದ ಬ್ರಹ್ಮಲೋಕ'[1] ಎಂದು ಪ್ರಿಯವಾದ ಮಾತನ್ನು ಆಡುತ್ತ, ಅರ್ಚಿಸುತ್ತ, ದೀಪ್ಯಮಾನವಾದ ಆಹುತಿಗಳು ಸೂರ್ಯರಶ್ಮಿಗಳ ದ್ವಾರಾ ಆ ಯಜಮಾನನನ್ನು ಒಯ್ಯುತ್ತವೆ.

[[1] ಸ್ವರ್ಗಲೋಕ]

ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾ
ಅಷ್ಟಾದಶೋಕ್ತಮವರಂ ಯೇಷು ಕರ್ಮ ।
ಏತಚ್ಛ್ರೇಯೋ ಯೇಽಭಿನಂದಂತಿ ಮೂಢಾ
ಜರಾಮೃತ್ಯುಂ ತೇ ಪುನರೇವಾಪಿ ಯಂತಿ　　॥ ೭ ॥

ಏತೇ=ಈ ಅಷ್ಟಾದಶ=ಹದಿನೆಂಟು ಯಜ್ಞರೂಪಾಃ=ಯಜ್ಞರೂಪಗಳು ಪ್ಲವಾಃ=ನಾಶವಾಗುವವುಗಳು ಅದೃಢಾಃ=ಅದೃಢವಾದುವು; ಯೇಷು=ಯಾವ ಅವುಗಳಲ್ಲಿ

ಅವರಂ = ಕೀಳು ತರದ ಕರ್ಮ = ಕರ್ಮವು ಉಕ್ತಂ = ಹೇಳಲ್ಪಟ್ಟಿದೆ. ಏತತ್ = ಇದು ಶ್ರೇಯಃ = ಶ್ರೇಯಸ್ಸೆಂದು ಯೇ = ಯಾವ ಮೂಢಾಃ = ಮೂಢರು ಅಭಿನಂದಂತಿ = ಸಂತೋಷಪಡುತ್ತಾರೆಯೋ ತೇ = ಅವರು ಪುನಃ ಏವ ಅಪಿ = ಪುನಃ ಜರಾಮೃತ್ಯುಂ = ಜರಾಮೃತ್ಯುಗಳನ್ನು ಯಂತಿ=ಹೊಂದುತ್ತಾರೆ

೭. ಈ ಹದಿನೆಂಟು[1] ಯಜ್ಞರೂಪಗಳು ನಶ್ವರವಾದವುಗಳು ಮತ್ತು ಅದೃಢವಾದುವು; ಅವುಗಳಲ್ಲಿ ಕೀಳು ತರದ[2] ಕರ್ಮವು ಹೇಳಲ್ಪಟ್ಟಿದೆ. ಇದು ಶ್ರೇಯಸ್ಸೆಂದು ಯಾವ ಮೂಢರು ಸಂತೋಷಪಡುತ್ತಾರೆಯೋ ಅವರು ಪುನಃ ಜರಾಮೃತ್ಯುಗಳನ್ನು ಹೊಂದುತ್ತಾರೆ.

[ಅವಿದ್ಯಾಕಾಮಕರ್ಮಗಳ ಕಾರ್ಯವೂ ಜ್ಞಾನರಹಿತವೂ ಆದ ಕರ್ಮಕ್ಕೆ ಹಿಂದೆ ಹೇಳಿದಂತೆ ಸ್ವರ್ಗವೇ ಫಲ. ಇದು ಅನಿತ್ಯವೆಂದೂ ಶ್ರುತಿಯು ತಿಳಿಸುತ್ತದೆ.

[1] ಹದಿನಾರು ಋತ್ವಿಕ್ಕುಗಳು ಯಜಮಾನ ಮತ್ತು ಅವನ ಪತ್ನಿ—ಇವರನ್ನು ಕರ್ಮವು ಆಶ್ರಯಿಸಿರುತ್ತದೆ.

[2] ಅವರ ಎಂದರೆ ಕೇವಲ ಜ್ಞಾನವರ್ಜಿತವಾದ.]

ಅವಿದ್ಯಾಯಾಮಂತರೇ ವರ್ತಮಾನಾಃ
ಸ್ವಯಂ ಧೀರಾಃ ಪಂಡಿತಂಮನ್ಯಮಾನಾಃ ।
ಜಂಘನ್ಯಮಾನಾಃ ಪರಿಯಂತಿ ಮೂಢಾ
ಅಂಧೇನೈವ ನೀಯಮಾನಾ ಯಥಾಂಧಾಃ ॥ ೮ ॥

ಅವಿದ್ಯಾಯಾಂ=ಅವಿದ್ಯೆಯ ಅಂತರೇ=ಮಧ್ಯದಲ್ಲಿ ವರ್ತಮಾನಾಃ=ಇರುವವರಾಗಿ ಸ್ವಯಂ=ತಾವೇ ಧೀರಾಃ = ಧೀರರು ಪಂಡಿತಂಮನ್ಯಮಾನಾಃ = ಪಂಡಿತರು ಎಂದು ತಿಳಿದುಕೊಳ್ಳುವವರಾಗಿ ಜಂಘನ್ಯಮಾನಾಃ = ಪೀಡಿಸಲ್ಪಡುವವರಾಗಿ ಮೂಢಾಃ = ಮೂಢರು ಅಂಧೇನ ಏವ=ಕುರುಡನಿಂದ ನೀಯಮಾನಾಃ=ಕರೆದುಕೊಂಡು ಹೋಗಲ್ಪಡುತ್ತಿರುವ ಅಂಧಾಃ ಯಥಾ=ಕುರುಡರು ಹೇಗೋ [ಹಾಗೆ] ಪರಿಯಂತಿ=ಸುತ್ತುತ್ತಿರುವರು.

೮. ಅವಿದ್ಯೆಯ ಮಧ್ಯದಲ್ಲಿ ಇರುವವರಾಗಿ, ತಾವೇ ಧೀರರು ಪಂಡಿತರು ಎಂದು ತಿಳಿದುಕೊಂಡು, ಪೀಡಿಸಲ್ಪಡುತ್ತ,[1] ಕುರುಡನು ಕರೆದುಕೊಂಡು ಹೋಗುತ್ತಿರುವ ಕುರುಡರಂತೆ ಈ ಮೂಢರು ಸುತ್ತುತ್ತಿರುವರು.

[[1] ಜರಾಮರಣ ಮೊದಲಾದ ಅನರ್ಥಗಳ ಸಮೂಹದಿಂದ.]

ಅವಿದ್ಯಾಯಾಂ ಬಹುಧಾ ವರ್ತಮಾನಾ
ವಯಂ ಕೃತಾರ್ಥಾ ಇತ್ಯಭಿಮನ್ಯಂತಿ ಬಾಲಾಃ ।
ಯತ್ ಕರ್ಮಿಣೋ ನ ಪ್ರವೇದಯಂತಿ ರಾಗಾತ್
ತೇನಾತುರಾಃ ಕ್ಷೀಣಲೋಕಾಶ್ಚ್ಯವಂತೇ ॥ ೯ ॥

ಅವಿದ್ಯಾಯಾಂ=ಅವಿದ್ಯೆಯಲ್ಲಿ ಬಹುಧಾ=ಬಹುಪ್ರಕಾರವಾಗಿ ವರ್ತಮಾನಾಃ=ಇರುವವರಾಗಿ ಬಾಲಾಃ=ಅಜ್ಞಾನಿಗಳು ವಯಂ=ನಾವು ಕೃತಾರ್ಥಾಃ=ಕೃತಾರ್ಥರು ಇತಿ=ಎಂದು ಅಭಿಮನ್ಯಂತಿ=ಅಭಿಮಾನಪಡುತ್ತಾರೆ. ಯತ್=ಯಾವ ಕಾರಣದಿಂದ ಕರ್ಮಿಣಃ=ಕರ್ಮಿಗಳು ರಾಗಾತ್=ಕರ್ಮಫಲದ ಆಸಕ್ತಿಯಿಂದ ನ ಪ್ರವೇದಯಂತಿ=ತಿಳಿಯುವುದಿಲ್ಲವೋ ತೇನ=ಆ ಕಾರಣದಿಂದ ಆತುರಾಃ=ದುಃಖಾರ್ತರಾಗಿ ಕ್ಷೀಣಲೋಕಾಃ=ಕರ್ಮಫಲವನ್ನು ಕ್ಷೀಣಮಾಡಿಕೊಂಡವರಾಗಿ [ಸ್ವರ್ಗಲೋಕಾತ್=ಸ್ವರ್ಗಲೋಕದಿಂದ] ಚ್ಯವಂತಿ=ಬೀಳುತ್ತಾರೆ.

೯. ಅವಿದ್ಯೆಯಲ್ಲಿ ಬಹುಪ್ರಕಾರವಾಗಿ ಇರುವವರಾಗಿ, 'ನಾವು ಕೃತಾರ್ಥರು' ಎಂದು ಈ ಅಜ್ಞಾನಿಗಳು ಅಭಿಮಾನಪಡುತ್ತಾರೆ. ಕರ್ಮಿಗಳು ಕರ್ಮಫಲದ ಆಸಕ್ತಿಯಿಂದ (ಇದನ್ನು) ತಿಳಿಯುವುದಿಲ್ಲ ; ಆ ಕಾರಣದಿಂದ ದುಃಖಾರ್ತರಾಗಿ ಕರ್ಮಫಲವನ್ನು ಕ್ಷೀಣಮಾಡಿಕೊಂಡವರಾಗಿ (ಸ್ವರ್ಗಲೋಕದಿಂದ) ಬೀಳುವರು.

ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ
ನಾನ್ಯಚ್ಛ್ರೇಯೋ ವೇದಯಂತೇ ಪ್ರಮೂಢಾಃ ।
ನಾಕಸ್ಯ ಪೃಷ್ಠೇ ಸುಕೃತೇಽನುಭೂತ್ವಾ
ಇಮಂ ಲೋಕಂ ಹೀನತರಂ ವಾ ವಿಶಂತಿ ॥ ೧೦ ॥

ಪ್ರಮೂಢಾಃ=ಪ್ರಮತ್ತರಾದ ಮೂಢರು ಇಷ್ಟಾಪೂರ್ತಂ=ಇಷ್ಟಾಪೂರ್ತಗಳನ್ನು ವರಿಷ್ಠಂ = ಪ್ರಧಾನವೆಂದು ಮನ್ಯಮಾನಾಃ = ತಿಳಿಯುವವರಾಗಿ ಅನ್ಯತ್ = ಬೇರೆ ಶ್ರೇಯಃ=ಶ್ರೇಯಃಸಾಧನವನ್ನು ನ ವೇದಯಂತೇ=ತಿಳಿಯುವುದಿಲ್ಲ. ತೇ=ಅವರು ನಾಕಸ್ಯ ಪೃಷ್ಠೇ=ಸ್ವರ್ಗದ ಮೇಲಿರುವ ಸುಕೃತೇ=ಭೋಗಸ್ಥಾನದಲ್ಲಿ [ಕರ್ಮಫಲಂ=ಕರ್ಮಫಲವನ್ನು] ಅನುಭೂತ್ವಾ=ಅನುಭವಿಸಿ ಇಮಂ ಲೋಕಂ=ಈ ಲೋಕವನ್ನು ಹೀನತರಂ ವಾ=ಅಥವಾ ಹೀನತರವಾದುದನ್ನು ವಿಶಂತಿ=ಪ್ರವೇಶಿಸುತ್ತಾರೆ.

೧೦. ಪ್ರಮತ್ತರಾದ ಮೂಢರು ಇಷ್ಟಾಪೂರ್ತಗಳನ್ನು[1] ಪ್ರಧಾನವೆಂದು[2] ತಿಳಿಯುವವರಾಗಿ ಬೇರೆ ಶ್ರೇಯಃಸಾಧನವನ್ನು[3] ತಿಳಿಯುವುದಿಲ್ಲ.

ಸ್ವರ್ಗದಲ್ಲಿರುವ ಭೋಗಸ್ಥಾನದಲ್ಲಿ(ಕರ್ಮಫಲವನ್ನು)ಅನುಭವಿಸಿ², ಅನಂತರ, ಈ ಲೋಕವನ್ನೋ ಅಥವಾ(ಇನ್ನೂ)ಹೀನತರವಾದುದನ್ನೋ ಪ್ರವೇಶಿಸುತ್ತಾರೆ.

[¹ ಯಾಗಾದಿ ಶ್ರೌತಕರ್ಮಕ್ಕೆ ಇಷ್ಟವೆಂದು ಹೆಸರು ; ಪೂರ್ತವೆಂದರೆ ಬಾವಿ ಕೆರೆ ಮೊದಲಾದುವನ್ನು ಕಟ್ಟಿಸುವ ಸ್ಮಾರ್ತಕರ್ಮ.

² ಇದೇ ಅತಿಶಯವಾದ ಪುರುಷಾರ್ಥಸಾಧನ ಎಂದು ತಿಳಿದುಕೊಂಡವರಾಗಿ

³ ಆತ್ಮಜ್ಞಾನವೆಂಬ.]

ತಪಃಶ್ರದ್ಧೇ ಯೇ ಹ್ಯುಪವಸಂತ್ಯರಣ್ಯೇ
ಶಾಂತಾ ವಿದ್ವಾಂಸೋ ಭೈಕ್ಷ್ಯಚರ್ಯಾಂ ಚರಂತಃ ।
ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ
ಯತ್ರಾಮೃತಃ ಸ ಪುರುಷೋ ಹ್ಯವ್ಯಯಾತ್ಮಾ ॥ ೧೧ ॥

ಯೇ ಹಿ = ಯಾರು ಅರಣ್ಯೇ = ಅರಣ್ಯದಲ್ಲಿ ತಪಃಶ್ರದ್ಧೇ = ತಪಃಶ್ರದ್ಧೆಗಳನ್ನು ಉಪವಸಂತಿ=ಸೇವಿಸುವರೊ ಭೈಕ್ಷ್ಯಚರ್ಯಾಂ = ಭಿಕ್ಷಾವೃತ್ತಿಯನ್ನು ಚರಂತಃ = ಮಾಡುವರೊ.[ಯೇ ಚ=ಯಾರು] ಶಾಂತಾಃ ವಿದ್ವಾಂಸಃ=ಶಾಂತರಾದ ವಿದ್ವಾಂಸರೊ. ತೇ=ಅವರು ವಿರಜಾಃ [ವಿರಜಸಃ]=ಪುಣ್ಯಪಾಪಕರ್ಮಗಳನ್ನು ಕಳೆದುಕೊಂಡವರಾಗಿ ಸೂರ್ಯದ್ವಾರೇಣ=ಸೂರ್ಯದ್ವಾರದ ಮೂಲಕ ಯತ್ರ=ಎಲ್ಲಿ ಸಃ ಹಿ=ಆ ಅಮೃತಃ =ಅಮೃತನಾದ ಅವ್ಯಯಾತ್ಮಾ=ಅವ್ಯಯಾತ್ಮನಾದ ಪುರುಷಾರುವನೊ [ತತ್ರ=ಅಲ್ಲಿಗೆ] ಪ್ರಯಾಂತಿ=ಹೋಗುತ್ತಾರೆ.

೧೧. ಯಾರು¹ ಅರಣ್ಯದಲ್ಲಿ ತಪಃಶ್ರದ್ಧೆಗಳನ್ನು² ಸೇವಿಸುತ್ತ ಭಿಕ್ಷಾವೃತ್ತಿಯನ್ನು ಮಾಡುವರೊ, (ಯಾರು) ಶಾಂತರಾದ³ ವಿದ್ವಾಂಸರೊ⁴ ಅವರು ಪುಣ್ಯಪಾಪಗಳನ್ನು ಕಳೆದುಕೊಂಡು ಸೂರ್ಯದ್ವಾರದ⁵ ಮೂಲಕ. ಎಲ್ಲಿ⁶ ಅಮೃತನೂ ಅವ್ಯಯಾತ್ಮನೂ⁷ ಆದ ಆ ಪುರುಷನಿರುವನೊ⁸ (ಅಲ್ಲಿಗೆ) ಹೋಗುತ್ತಾರೆ.⁹

[¹ ಜ್ಞಾನಯುಕ್ತರಾದ ವಾನಪ್ರಸ್ಥರು ಮತ್ತು ಸಂನ್ಯಾಸಿಗಳು.

² ತಮ್ಮ ತಮ್ಮ ಆಶ್ರಮಕ್ಕೆ ವಿಹಿತವಾಗಿರುವ ಕರ್ಮ ತಪಸ್ಸು : ಹಿರಣ್ಯಗರ್ಭಾದಿಗಳ ವಿದ್ಯೆ ಶ್ರದ್ಧೆ.

³ ಜಿತೇಂದ್ರಿಯರಾದ.

⁴ ಜ್ಞಾನಪ್ರಧಾನರಾದ ಗೃಹಸ್ಥರು.

⁵ ಸೂರ್ಯೋಪಲಕ್ಷಿತವಾದ ಉತ್ತರಾಯಣಮಾರ್ಗ.

⁶ ಸತ್ಯಲೋಕಾದಿಗಳಲ್ಲಿ.

[7] ಸಂಸಾರವಿರುವ ವರೆಗೂ ಇರುವುದರಿಂದ ಅವ್ಯಯಸ್ವಭಾವದವನು.

[8] ಪ್ರಥಮಜನಾದ ಹಿರಣ್ಯಗರ್ಭ.

[9] ಇಲ್ಲಿಯುವರೆಗೂ ಅಪರವಿದ್ಯೆಯಿಂದ ಹೊಂದುವ ಸಂಸಾರಗತಿಗಳು. ಇದು ಅಪರವಿದ್ಯೆಯ ಪ್ರಕರಣವಾದುದರಿಂದ ಹಿರಣ್ಯಗರ್ಭನ ಲೋಕದ ಪ್ರಾಪ್ತಿಯು ಆತ್ಯಂತಿಕ ಮೋಕ್ಷವಲ್ಲ.]

ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ
ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ ।
ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥ ೧೨ ॥

ಬ್ರಾಹ್ಮಣಃ = ಬ್ರಾಹ್ಮಣನು ಕರ್ಮಚಿತಾನ್ = ಕರ್ಮಕೃತವಾದ ಲೋಕಾನ್ = ಲೋಕಗಳನ್ನು ಪರೀಕ್ಷ್ಯ = ಪರೀಕ್ಷಿಸಿ ಅಕೃತಃ = ಅಕೃತವು ಕೃತೇನ = ಕೃತದಿಂದ ನ ಅಸ್ತಿ=ಆಗುವುದಿಲ್ಲ ಇತಿ=ಎಂದು ನಿರ್ವೇದಂ=ವೈರಾಗ್ಯವನ್ನು ಆಯಾತ್=ಹೊಂದಬೇಕು. ಸಃ = ಅವನು ತದ್ವಿಜ್ಞಾನಾರ್ಥಂ = ಅದನ್ನು ತಿಳಿದುಕೊಳ್ಳುವುದಕ್ಕಾಗಿ ಸಮಿತ್ಪಾಣಿಃ=ಸಮಿತ್ತುಗಳ ಕಂತೆಯನ್ನು ಕೈಯಲ್ಲಿ ತೆಗೆದುಕೊಂಡವನಾಗಿ ಶ್ರೋತ್ರಿಯಂ=ಶ್ರೋತ್ರಿಯನಾದ ಬ್ರಹ್ಮನಿಷ್ಠಂ=ಬ್ರಹ್ಮನಿಷ್ಠನಾದ ಗುರುಂ ಏವ=ಗುರುವನ್ನೇ ಅಭಿಗಚ್ಛೇತ್=ಹೊಂದಬೇಕು.

೧೨. ಬ್ರಾಹ್ಮಣನು ಕರ್ಮಕೃತವಾದ[1] ಲೋಕಗಳನ್ನು ಪರೀಕ್ಷಿಸಿ,[2] 'ಅಕೃತವು[3] ಕೃತದಿಂದ[4] ಆಗುವುದಿಲ್ಲ' ಎಂದು ವೈರಾಗ್ಯವನ್ನು ಹೊಂದಬೇಕು. ಅದನ್ನು[5] ತಿಳಿಯುವುದಕ್ಕಾಗಿ ಅವನು ಸಮಿತ್ತುಗಳ ಕಂತೆಯನ್ನು ಕೈಯಲ್ಲಿ ಹಿಡಿದುಕೊಂಡು ಶ್ರೋತ್ರಿಯನೂ[6] ಬ್ರಹ್ಮನಿಷ್ಠನೂ[7] ಆದ ಗುರುವನ್ನೇ ಹೊಂದಬೇಕು.[8]

[[1] ಧರ್ಮಾಧರ್ಮಗಳಿಂದ ಉಂಟಾಗಿರುವ.

[2] ಪ್ರತ್ಯಕ್ಷಾದಿ ಪ್ರಮಾಣಗಳಿಂದ ಇವುಗಳ ನಿಜವಾದ ಸ್ವರೂಪವನ್ನು ಎಂದರೆ ಅನಿತ್ಯತ್ವವನ್ನು ತಿಳಿದುಕೊಂಡು.

[3] ನಿತ್ಯವಸ್ತುವು.

[4] ಎಲ್ಲ ಕರ್ಮವು ಅನಿತ್ಯವಾದುದಕ್ಕೆ ಸಾಧನ ; ಹೇಗೆಂದರೆ : ಕರ್ಮದ ಕಾರ್ಯವು ನಾಲ್ಕು ವಿಧವಾಗಿರುತ್ತದೆ : ಉತ್ಪಾದಿಸತಕ್ಕದ್ದು, ಪಡೆಯತಕ್ಕದ್ದು, ಸಂಸ್ಕರಿಸತಕ್ಕದ್ದು ಮತ್ತು ವಿಕಾರಗೊಳಿಸತಕ್ಕದ್ದು.

[5] ಅಭಯವೂ ಮಂಗಳವೂ ನಿತ್ಯವೂ ಆದ ಪದ.

[6] ಅಧ್ಯಯನಶ್ರುತಾರ್ಥಸಂಪನ್ನನು.

[7] ಸರ್ವಕರ್ಮಗಳನ್ನು ಬಿಟ್ಟು ಕೇವಲ ಅಧ್ಯಾತ್ಮವಿಷಯದಲ್ಲಿ ನಿಷ್ಠೆಯನ್ನು ಹೊಂದಿರುವವನು.

[8] ಶಾಸ್ತ್ರಜ್ಞಾನದಿಂದ ಸ್ವತಂತ್ರವಾಗಿ ಬ್ರಹ್ಮಜ್ಞಾನವನ್ನು ಹುಡುಕಬಾರದು ಎಂದು ಭಾವ.]

ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್
ಪ್ರಶಾಂತಚಿತ್ತಾಯ ಶಮಾನ್ವಿತಾಯ ।
ಯೇನಾಕ್ಷರಂ ಪುರುಷಂ ವೇದ ಸತ್ಯಂ
ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಮ್ ॥ ೧೩ ॥

ಸಃ ವಿದ್ವಾನ್=ಆ ವಿದ್ವಾಂಸನು ಸಮ್ಯಕ್=ಸರಿಯಾಗಿ ಉಪಸನ್ನಾಯ=ಬಂದಿರುವ ಪ್ರಶಾಂತಚಿತ್ತಾಯ=ಪ್ರಶಾಂತಚಿತ್ತನಾದ ಶಮಾನ್ವಿತಾಯ=ಶಮೆಯಿಂದ ಕೂಡಿರುವ ತಸ್ಮೈ=ಅವನಿಗೆ ತಾಂ=ಆ ಬ್ರಹ್ಮವಿದ್ಯೆಯನ್ನು ತತ್ತ್ವತಃ=ಯಥಾರ್ಥವಾಗಿ ಪ್ರೋವಾಚ [ಪ್ರಬ್ರೂಯಾತ್]=ಉಪದೇಶಿಸಬೇಕು. ಯೇನ=ಯಾವುದರಿಂದ ಸತ್ಯಂ =ಪರಮಾರ್ಥಸ್ವರೂಪವುಳ್ಳ ಅಕ್ಷರಂ=ಅಕ್ಷಯನಾದ ಪುರುಷಂ=ಪುರುಷನನ್ನು ವೇದ=ತಿಳಿಯುವನೋ.

೧೩. (ಹೀಗೆ) ಸರಿಯಾಗಿ[1] ಬಂದಿರುವ ಪ್ರಶಾಂತಚಿತ್ತನಾದ[2] ಶಮೆಯಿಂದ ಕೂಡಿರುವ[3] ಅವನಿಗೆ ಆ ವಿದ್ವಾಂಸನು[4] ಯಾವುದರಿಂದ[5] ಪರಮಾರ್ಥ ಸ್ವರೂಪವುಳ್ಳ ಅಕ್ಷಯನಾದ ಪುರುಷನನ್ನು ತಿಳಿಯುವನೋ ಆ ಬ್ರಹ್ಮವಿದ್ಯೆಯನ್ನು ಯಥಾರ್ಥವಾಗಿ ಉಪದೇಶಿಸಬೇಕು.[6]

[[1] ಶಾಸ್ತ್ರಪ್ರಕಾರ.

[2] ದರ್ಪಾದಿದೋಷಗಳಿಲ್ಲದ.

[3] ಬಾಹ್ಯೇಂದ್ರಿಯಗಳನ್ನು ಶಮನಮಾಡಿ ವಿರಕ್ತನಾದ.

[4] ಬ್ರಹ್ಮವೇತ್ತನಾದ ಗುರು.

[5] ಯಾವ ವಿಜ್ಞಾನದಿಂದ ಎಂದರೆ ಪರಾವಿದ್ಯೆಯಿಂದ.

[6] ಸಚ್ಛಿಷ್ಯನನ್ನು ಅವಿದ್ಯಾಮಹೋದಧಿಯಿಂದ ದಾಟಿಸಬೇಕೆಂದು ಆಚಾರ್ಯನಿಗೆ ನಿಯಮವಾಗಿರುತ್ತದೆ.]

ಎರಡನೆಯ ಮುಂಡಕ

ಮೊದಲನೆಯ ಖಂಡ

ತದೇತತ್ ಸತ್ಯಂ—

ಯಥಾ ಸುದೀಪ್ತಾತ್ ಪಾವಕಾದ್ವಿಸ್ಫುಲಿಂಗಾಃ
ಸಹಸ್ರಶಃ ಪ್ರಭವಂತೇ ಸರೂಪಾಃ ।
ತಥಾಕ್ಷರಾದ್ವಿವಿಧಾಃ ಸೋಮ್ಯ ಭಾವಾಃ
ಪ್ರಜಾಯಂತೇ ತತ್ರ ಚೈವಾಪಿಯಂತಿ ॥ ೧ ॥

ತತ್=ಆ ಏತತ್=ಇದು ಸತ್ಯಂ=ಸತ್ಯ : ಯಥಾ=ಹೇಗೆ ಸುದೀಪ್ತಾತ್=ಪ್ರಜ್ವಲಿತವಾದ ಪಾವಕಾತ್=ಅಗ್ನಿಯಿಂದ ಸರೂಪಾಃ=ಅಗ್ನಿರೂಪವಾದ ವಿಸ್ಫುಲಿಂಗಾಃ=ಕಿಡಿಗಳು ಸಹಸ್ರಶಃ=ಸಾವಿರಾರು ಸಂಖ್ಯೆಯಲ್ಲಿ ಪ್ರಭವಂತೇ=ಹುಟ್ಟುತ್ತವೆಯೊ ತಥಾ=ಹಾಗೆಯೇ ಸೋಮ್ಯ=ಹೇ ಸೋಮ್ಯನೆ. ಅಕ್ಷರಾತ್=ಅಕ್ಷರದಿಂದ ವಿವಿಧಾಃ=ವಿವಿಧವಾದ ಭಾವಾಃ=ಜೀವಗಳು ಪ್ರಜಾಯಂತೇ=ಹುಟ್ಟುತ್ತವೆ. ಚ=ಮತ್ತು ತತ್ರ ಏವ=ಅದರಲ್ಲಿಯೇ ಅಪಿಯಂತಿ=ಲೀನವಾಗುತ್ತವೆ.

೧. ಆ ಇದು ಸತ್ಯ : ಪ್ರಜ್ವಲಿತವಾದ ಅಗ್ನಿಯಿಂದ ಅಗ್ನಿರೂಪವಾದ ಕಿಡಿಗಳು ಹೇಗೆ ಸಹಸ್ರಶಃ ಹುಟ್ಟುತ್ತವೆಯೊ ಹಾಗೆಯೇ ಎಲೈ ಸೋಮ್ಯ, ಅಕ್ಷರದಿಂದ ವಿವಿಧವಾದ ಜೀವಗಳು ಹುಟ್ಟುತ್ತವೆ ಮತ್ತು ಅದರಲ್ಲಿಯೇ ಲೀನವಾಗುತ್ತವೆ.[1]

[ಹಿಂದೆ ಅಪರವಿದ್ಯೆಯ ಕಾರ್ಯವನ್ನೆಲ್ಲ ಹೇಳಿದ್ದಾಯಿತು. ಯಾವ ಅಕ್ಷರದಿಂದ ಸಂಸಾರವು ಹುಟ್ಟಿ ಲೀನವಾಗುತ್ತದೆಯೊ ಆ ಅಕ್ಷರವು ಸತ್ಯ. ಇದೇ ಬ್ರಹ್ಮವಿದ್ಯೆಗೆ ವಿಷಯವು. ಇದನ್ನು ತಿಳಿಸಲು ಮುಂದಿನ ಗ್ರಂಥವು ಆರಂಭವಾಗಿರುತ್ತದೆ. ಈ ಸತ್ಯವಾದ ಅಕ್ಷರವು ಅತ್ಯಂತ ಪರೋಕ್ಷವಾಗಿರುವುದರಿಂದ ಜಿಜ್ಞಾಸುಗಳ ಸುಖ ಬೋಧಕ್ಕಾಗಿ ಕಾಂತಿಯುಳ್ಳ ಒಂದು ದೃಷ್ಟಾಂತವನ್ನು ಹೇಳುತ್ತದೆ.

[1] ಗಡಿಗೆ ಮೊದಲಾದ ಉಪಾಧಿಗಳ ಮೂಲಕ ಸಣ್ಣ ಸಣ್ಣ ಆಕಾಶಗಳ ಉತ್ಪತ್ತಿಲಯಗಳಿಗೆ ಮಹಾಕಾಶವು ಕಾರಣವಾಗಿರುವಂತೆ, ನಾಮರೂಪಗಳಿಂದ ಉಂಟಾದ ದೇಹೋಪಾಧಿಗಳ ಮೂಲಕ ಜೀವಗಳ ಉತ್ಪತ್ತಿಲಯಗಳಿಗೆ ಅಕ್ಷರವೇ ಕಾರಣವಾಗಿರುವುದು.]

ದಿವ್ಯೋ ಹ್ಯಮೂರ್ತಃ ಪುರುಷಃ ಸಬಾಹ್ಯಾಭ್ಯಂತರೋ ಹ್ಯಜಃ ।
ಅಪ್ರಾಣೋ ಹ್ಯಮನಾಃ ಶುಭ್ರೋ ಹ್ಯಕ್ಷರಾತ್ ಪರತಃ ಪರಃ ॥ ೨ ॥

ದಿವ್ಯಃ=ದಿವ್ಯನಾದ ಅಮೂರ್ತಃ ಹಿ=ಅಮೂರ್ತನಾದ ಪುರುಷಃ=ಪುರುಷನು. ಸಃ ಬಾಹ್ಯಾಭ್ಯಂತರಃ=ಒಳಗೂ ಹೊರಗೂ ಇರುವನು ಅಜಃ ಹಿ=ಜನ್ಮರಹಿತನು. ಅಪ್ರಾಣಃ=ಪ್ರಾಣರಹಿತನು ಅಮನಾಃ ಹಿ=ಮನಃಶೂನ್ಯನು ಶುಭ್ರಃ ಹಿ=ಶುದ್ಧನು. ಪರತಃ ಅಕ್ಷರಾತ್=ಪರವಾದ ಅಕ್ಷರಕ್ಕಿಂತ ಪರಃ=ಶ್ರೇಷ್ಠನು.

೨. ದಿವ್ಯನೂ[1] ಅಮೂರ್ತನೂ[2] ಆದ ಪುರುಷನು[3] ಒಳಗೂ ಹೊರಗೂ ಇರುವವನು. ಜನ್ಮರಹಿತನು. ಪ್ರಾಣಮನಸ್ಸುಗಳಿಲ್ಲದವನು. ಶುದ್ಧನು. ಪರವಾದ ಅಕ್ಷರಕ್ಕಿಂತಲೂ[4] ಶ್ರೇಷ್ಠನು.

[[1] ಸ್ವಯಂಪ್ರಕಾಶನು.
[2] ಯಾವ ಆಕಾರವೂ ಇಲ್ಲದವನು.
[3] ನಿರುಪಾಧಿಕ ಪುರುಷನು.
[4] ಎಲ್ಲ ಕಾರ್ಯಗಳಿಗೂ ಕಾರಣವಾಗಿ ತೋರುತ್ತಿರುವ ನಾಮರೂಪಬೀಜವಾದ ಅವ್ಯಾಕೃತವೆಂಬ ಅಕ್ಷರಕ್ಕಿಂತ.]

ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ ।
ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ ॥ ೩ ॥

ಏತಸ್ಮಾತ್ = ಈ ಪುರುಷನಿಂದ ಪ್ರಾಣಃ = ಪ್ರಾಣ ಜಾಯತೇ = ಹುಟ್ಟುತ್ತದೆ. ಮನಃ=ಮನಸ್ಸು ಸರ್ವೇಂದ್ರಿಯಾಣಿ=ಎಲ್ಲ ಇಂದ್ರಿಯಗಳು ಖಂ=ಆಕಾಶ ವಾಯುಃ= ವಾಯು ಜ್ಯೋತಿಃ=ಅಗ್ನಿ ಆಪಃ=ನೀರು ವಿಶ್ವಸ್ಯ ಧಾರಿಣೀ ಪೃಥಿವೀ ಚ=ಮತ್ತು ಎಲ್ಲವನ್ನೂ ಧರಿಸಿರುವ ಪೃಥ್ವಿ [ಇವುಗಳು ಹುಟ್ಟುತ್ತವೆ].

೩. ಪ್ರಾಣ, ಮನಸ್ಸು, ಎಲ್ಲ ಇಂದ್ರಿಯಗಳು, ಆಕಾಶ, ವಾಯು, ಅಗ್ನಿ, ನೀರು, ಎಲ್ಲವನ್ನೂ ಧರಿಸಿರುವ ಪೃಥ್ವಿ—ಇವುಗಳು ಈ ಪುರುಷನಿಂದ ಹುಟ್ಟುತ್ತವೆ.

ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ
ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ ।
ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ
ಪದ್ಭ್ಯಾಂ ಪೃಥಿವೀ ಹ್ಯೇಷ ಸರ್ವಭೂತಾಂತರಾತ್ಮಾ ॥ ೪ ॥

ಅಸ್ಯ [ಯಸ್ಯ]=ಯಾವನಿಗೆ ಅಗ್ನಿಃ=ದ್ಯುಲೋಕವು ಮೂರ್ಧಾ=ತಲೆಯೋ, ಚಂದ್ರ-ಸೂರ್ಯೌ=ಚಂದ್ರಸೂರ್ಯರು ಚಕ್ಷುಷೀ=ಕಣ್ಣುಗಳೋ, ದಿಶಃ=ದಿಕ್ಕುಗಳು ಶ್ರೋತ್ರೇ=ಕಿವಿಗಳೋ ವಿವೃತಾಃ ವೇದಾಃ ಚ=ಪ್ರಕಟಿತವಾದ ವೇದಗಳು ವಾಕ್=ವಾಕ್ಕೋ,

ವಾಯುಃ = ವಾಯುವು ಪ್ರಾಣಃ = ಪ್ರಾಣವೂ. ವಿಶ್ವಂ = ವಿಶ್ವವು ಹೃದಯಂ = ಹೃದಯವೂ. ಪದ್ಭ್ಯಾಂ = [ಯಾವನ] ಪಾದಗಳಿಂದ ಪೃಥಿವೀ [ಜಾತಾ] = ಪೃಥ್ವಿಯು ಹುಟ್ಟಿರುವುದೊ ಏಷಃ ಹಿ ಸರ್ವಭೂತಾಂತರಾತ್ಮಾ = ಈ ಸರ್ವಭೂತಗಳ ಅಂತರಾತ್ಮನು [ಏತಸ್ಮಾತ್ ಏವ ಪುರುಷಾತ್ ಜಾಯತೇ = ಈ ಪುರುಷನಿಂದಲೇ ಹುಟ್ಟುತ್ತಾನೆ.]

೪. ಯಾವನಿಗೆ ಅಗ್ನಿಯು ತಲೆಯೊ, ಚಂದ್ರಸೂರ್ಯರು ಕಣ್ಣುಗಳೊ, ದಿಕ್ಕುಗಳು ಕಿವಿಗಳೊ, ಪ್ರಕಟವಾದ ವೇದಗಳು ವಾಕ್ಕೊ, ವಿಶ್ವವು ಹೃದಯವೊ ಯಾವನ ಪಾದಗಳಿಂದ ಪೃಥ್ವಿಯು ಹುಟ್ಟಿರುವುದೊ, ಈ ಸರ್ವಭೂತಗಳ ಅಂತರಾತ್ಮನು[1] (ಈ ಪುರುಷನಿಂದಲೇ ಹುಟ್ಟುತ್ತಾನೆ).

[[1] ವಿರಾಟ್‌ಪುರುಷನೂ ಪ್ರಥಮಶರೀರಿಯೂ ಮೂರು ಲೋಕಗಳೆಂಬ ದೇಹವೇ ಉಪಾಧಿಯಾಗಿ ಉಳ್ಳವನೂ ಅನಂತನೂ ಆದ ವಿಷ್ಣು; ಇವನೇ ಸರ್ವಭೂತಗಳಲ್ಲಿಯೂ ಇರುವ ದ್ರಷ್ಟೃ ಶ್ರೋತೃ ಮಂತೃ ವಿಜ್ಞಾತೃ ಮತ್ತು ಸರ್ವಕರಣಗಳ ಆತ್ಮ.]

ತಸ್ಮಾದಗ್ನಿಃ ಸಮಿಧೋ ಯಸ್ಯ ಸೂರ್ಯಃ
ಸೋಮಾತ್ ಪರ್ಜನ್ಯ ಓಷಧಯಃ ಪೃಥಿವ್ಯಾಮ್ ।
ಪುಮಾನ್ ರೇತಃ ಸಿಂಚತಿ ಯೋಷಿತಾಯಾಂ
ಬಹ್ವೀಃ ಪ್ರಜಾಃ ಪುರುಷಾತ್ ಸಂಪ್ರಸೂತಾಃ ॥ ೫ ॥

ಯಸ್ಯ = ಯಾವುದಕ್ಕೆ ಸೂರ್ಯಃ = ಸೂರ್ಯನು ಸಮಿಧಃ = ಸಮಿತ್ತೊ [ಸಃ] ಅಗ್ನಿಃ = ಆ ದ್ಯುಲೋಕವು ತಸ್ಮಾತ್=ಆ ಪುರುಷನಿಂದಲೇ [ಸಂಭವತಿ=ಹುಟ್ಟುತ್ತದೆ] [ದ್ಯುಲೋಕಾಗ್ನೇಃ ನಿಷ್ಪನ್ನಾತ್ = ದ್ಯುಲೋಕವೆಂಬ ಅಗ್ನಿಯಿಂದ ಹುಟ್ಟಿದ]; ಸೋಮಾತ್ = ಸೋಮನಿಂದ ಪರ್ಜನ್ಯಃ = ಪರ್ಜನ್ಯನು, ಪೃಥಿವ್ಯಾಂ = ಪೃಥ್ವಿಯಲ್ಲಿ [ಪರ್ಜನ್ಯಾತ್ = ಪರ್ಜನ್ಯನಿಂದ] ಓಷಧಯಃ = ಸಸ್ಯಗಳು; ಪುಮಾನ್ = ಪುರುಷನು ಯೋಷಿತಾಯಾಂ = ಸ್ತ್ರೀಯಲ್ಲಿ ರೇತಃ = [ಸಸ್ಯಗಳ ಪರಿಣಾಮವಾದ] ರೇತಸ್ಸನ್ನು ಸಿಂಚತಿ = ಸಿಂಚಿಸುತ್ತಾನೆ; [ಹೀಗೆ] ಬಹ್ವೀಃ = ಅನೇಕ ಪ್ರಜಾಃ = ಪ್ರಜೆಗಳು ಪುರುಷಾತ್ = ಪರಮಪುರುಷನಿಂದ ಸಂಪ್ರಸೂತಾಃ = ಹುಟ್ಟುತ್ತಾರೆ.

೫. ಯಾವುದಕ್ಕೆ ಸೂರ್ಯನು ಸಮಿತ್ತೊ ಆ ದ್ಯುಲೋಕವು ಆ ಪುರುಷನಿಂದಲೇ (ಹುಟ್ಟುತ್ತದೆ). (ದ್ಯುಲೋಕವೆಂಬ ಅಗ್ನಿಯಿಂದ ಹುಟ್ಟಿದ) ಸೋಮನಿಂದ ಪರ್ಜನ್ಯನು (ಹುಟ್ಟುತ್ತಾನೆ), (ಪರ್ಜನ್ಯನಿಂದ) ಪೃಥ್ವಿಯಲ್ಲಿ ಸಸ್ಯಗಳು (ಹುಟ್ಟುತ್ತವೆ); (ಸಸ್ಯಪರಿಣಾಮವಾದ) ರೇತಸ್ಸನ್ನು ಪುರುಷನು ಸ್ತ್ರೀಯಲ್ಲಿ ಸಿಂಚಿಸುತ್ತಾನೆ; ಹೀಗೆ ಅನೇಕ ಪ್ರಜೆಗಳು ಪರಮಪುರುಷನಿಂದ ಹುಟ್ಟುತ್ತಾರೆ.

[ದ್ಯುಲೋಕವು ಮೊದಲನೆಯ ಅಗ್ನಿ. ಪರ್ಜನ್ಯನು (ಮೇಘಗಳು) ಎರಡನೆಯ ಅಗ್ನಿ. ಪೃಥ್ವಿ ಮೂರನೆಯ ಅಗ್ನಿ. ಪುರುಷನು ನಾಲ್ಕನೆಯ ಅಗ್ನಿ. ಸ್ತ್ರೀ ಐದನೆಯ ಅಗ್ನಿ. ಈ ಪಂಚಾಗ್ನಿಗಳ ಮೂಲಕ ಸಂಸಾರದಲ್ಲಿ ಹುಟ್ಟುವ ಪ್ರಾಣಿಗಳೆಲ್ಲವೂ ಪರಮ ಪುರುಷನಿಂದಲೇ ಹುಟ್ಟಿದ್ದಾರೆ ಎಂದು ಈ ಮಂತ್ರದಲ್ಲಿ ಹೇಳಿದೆ.]

ತಸ್ಮಾದೃಚಃ ಸಾಮ ಯಜೂಂಷಿ ದೀಕ್ಷಾ
ಯಜ್ಞಾಶ್ಚ ಸರ್ವೇ ಕ್ರತವೋ ದಕ್ಷಿಣಾಶ್ಚ ।
ಸಂವತ್ಸರಶ್ಚ ಯಜಮಾನಶ್ಚ ಲೋಕಾಃ
ಸೋಮೋ ಯತ್ರ ಪವತೇ ಯತ್ರ ಸೂರ್ಯಃ ॥ ೬ ॥

ತಸ್ಮಾತ್ = ಆ ಪುರುಷನಿಂದಲೇ ಋಚಃ = ಋಕ್ಕುಗಳು ಸಾಮ = ಸಾಮವು ಯಜೂಂಷಿ = ಯಜುಸ್ಸುಗಳು ದೀಕ್ಷಾಃ=ದೀಕ್ಷೆಗಳು ಸರ್ವೇ = ಎಲ್ಲ ಯಜ್ಞಾಃ ಚ ಕ್ರತವಃ = ಯಜ್ಞಗಳು ಮತ್ತು ಕ್ರತುಗಳು ದಕ್ಷಿಣಾಃ ಚ = ದಕ್ಷಿಣೆಗಳು ಸಂವತ್ಸರಃ ಚ = ಸಂವತ್ಸರವು ಯಜಮಾನಃ ಚ = ಯಜಮಾನನು. ಯತ್ರ = ಎಲ್ಲಿ ಸೋಮಃ = ಸೋಮನು ಪವತೇ = ಪವಿತ್ರಗೊಳಿಸುವನೊ ಯತ್ರ = ಎಲ್ಲಿ ಸೂರ್ಯಃ=ಸೂರ್ಯನು [ತಪತಿ = ತಪಿಸುತ್ತಾನೆಯೊ] [ತೇ] ಲೋಕಾಃ = ಆ ಲೋಕಗಳು [ಉಂಟಾಗುತ್ತವೆ.]

೬. ಆ ಪುರುಷನಿಂದಲೇ ಋಕ್ಕುಗಳು[1] ಸಾಮವು[2] ಯಜುಸ್ಸುಗಳು[3] ದೀಕ್ಷೆಗಳು[4] ಎಲ್ಲ ಯಜ್ಞಗಳು[5] ಮತ್ತು ಕ್ರತುಗಳು[6] ದಕ್ಷಿಣೆಗಳು[7] ಸಂವತ್ಸರವು[8] ಯಜಮಾನನು,[9] ಎಲ್ಲಿ ಸೋಮನು ಪವಿತ್ರಗೊಳಿಸುವನೊ ಎಲ್ಲಿ ಸೂರ್ಯನು (ತಪಿಸುವನೊ) ಆ ಲೋಕಗಳು[10] (ಉಂಟಾಗುತ್ತವೆ.)

[[1] ನಿಯಮಿತವಾದ ಅಕ್ಷರಗಳ ಪಾದಗಳುಳ್ಳ ಗಾಯತ್ರ್ಯಾದಿ ಛಂದಸ್ಸುಗಳಿಂದ ಕೂಡಿರುವ ಮಂತ್ರಗಳು.

[2] ಐದು ಭಕ್ತಿಗಳು ಅಥವಾ ಏಳು ಭಕ್ತಿಗಳು ಉಳ್ಳ ಮತ್ತು ಸ್ತೋಭವೇ ಮೊದಲಾದ ಗೀತೆಗಳಿಂದ ಕೂಡಿರುವ.

[3] ಅನಿಯತವಾದ ಅಕ್ಷರಗಳ ಪಾದಗಳುಳ್ಳ ವಾಕ್ಯಗಳು.

[4] ಕರ್ತೃವು ಮಾಡಬೇಕಾದ ಮೌಂಜಿಬಂಧನ ಮೊದಲಾದ ನಿಯಮಗಳು.

[5] ಅಗ್ನಿಹೋತ್ರಾದಿಗಳು.

[6] ಯೂಪವು ಬೇಕಾಗಿರುವ ಯಾಗಾದಿಗಳು.

[7] ಒಂದು ಹಸುವಿನಿಂದ ಸರ್ವಸ್ವವನ್ನೂ ಕೊಡುವುದು.

[8] ಕರ್ಮಾಂಗವಾದ ಕಾಲ.

[9] ಕರ್ಮವನ್ನು ಮಾಡುವವನು.

[10] ದಕ್ಷಿಣಾಯನ ಉತ್ತರಾಯಣ ಎಂಬ ಎರಡು ಮಾರ್ಗಗಳಿಂದ ಹೊಂದಲ್ಪಡತಕ್ಕ ಕರ್ಮಫಲಭೂತವಾದ ಲೋಕಗಳು.]

ತಸ್ಮಾಚ್ಚ ದೇವಾ ಬಹುಧಾ ಸಂಪ್ರಸೂತಾಃ
ಸಾಧ್ಯಾ ಮನುಷ್ಯಾಃ ಪಶವೋ ವಯಾಂಸಿ ।
ಪ್ರಾಣಾಪಾನೌ ವ್ರೀಹಿಯವೌ ತಪಶ್ಚ
ಶ್ರದ್ಧಾ ಸತ್ಯಂ ಬ್ರಹ್ಮಚರ್ಯಂ ವಿಧಿಶ್ಚ ॥ ೭ ॥

ತಸ್ಮಾತ್ ಚ = ಆ ಪುರುಷನಿಂದ ದೇವಾಃ=ದೇವತೆಗಳು ಬಹುಧಾ=ಬಹುವಿಧವಾಗಿ ಸಂಪ್ರಸೂತಾಃ = ಹುಟ್ಟಿರುತ್ತಾರೆ. ಸಾಧ್ಯಾಃ = ಸಾಧ್ಯರು ಮನುಷ್ಯಾಃ = ಮನುಷ್ಯರು ಪಶವಃ = ಪಶುಗಳು ವಯಾಂಸಿ = ಪಕ್ಷಿಗಳು ಪ್ರಾಣಾಪಾನೌ = ಪ್ರಾಣಾಪಾನಗಳು ವ್ರೀಹಿಯವೌ = ವ್ರೀಹಿಯವಗಳು ತಪಃ ಚ =ತಪಸ್ಸು ಶ್ರದ್ಧಾ=ಶ್ರದ್ಧೆ ಸತ್ಯಂ = ಸತ್ಯ ಬ್ರಹ್ಮಚರ್ಯಂ = ಬ್ರಹ್ಮಚರ್ಯ ವಿಧಿಃ ಚ = ಮತ್ತು ವಿಧಿ [ಹುಟ್ಟಿರುತ್ತವೆ.]

೭. ಆ ಪುರುಷನಿಂದ ದೇವತೆಗಳು[1] ಬಹುವಿಧವಾಗಿ[2] ಹುಟ್ಟಿರುತ್ತಾರೆ; ಸಾಧ್ಯರು[3] ಮನುಷ್ಯರು[4] ಪಶುಗಳು ಪಕ್ಷಿಗಳು ಪ್ರಾಣಾಪಾನಗಳು ವ್ರೀಹಿಯವಗಳು[5] ತಪಸ್ಸು[6] ಶ್ರದ್ಧೆ[7] ಸತ್ಯ ಬ್ರಹ್ಮಚರ್ಯ ಮತ್ತು ವಿಧಿ[8] (ಹುಟ್ಟಿರುತ್ತವೆ).

[[1] ಕರ್ಮಾಂಗಭೂತರಾದ.
[2] ವಸುಗಳೇ ಮೊದಲಾದ ಗಣಭೇದದಿಂದ.
[3] ಒಂದು ವಿಧವಾದ ದೇವತೆಗಳು.
[4] ಕರ್ಮಕ್ಕೆ ಅಧಿಕಾರಿಗಳಾದವರು.
[5] ಹವಿಸ್ಸಿಗೆ ಬೇಕಾದ.
[6] ಪುರುಷಸಂಸ್ಕಾರಲಕ್ಷಣವುಳ್ಳದ್ದು ಮತ್ತು ಕರ್ಮಕ್ಕೆ ಅಂಗವಾಗಿ ಉಳ್ಳದ್ದು ಮತ್ತು ಸ್ವತಂತ್ರವಾಗಿ ಫಲಸಾಧನವಾದುದು.
[7] ಚಿತ್ತಪ್ರಸಾದ. ಆಸ್ತಿಕ್ಯಬುದ್ಧಿ.
[8] ಇತಿಕರ್ತವ್ಯತೆ.]

ಸಪ್ತ ಪ್ರಾಣಾಃ ಪ್ರಭವಂತಿ ತಸ್ಮಾತ್
ಸಪ್ತಾರ್ಚಿಷಃ ಸಮಿಧಃ ಸಪ್ತ ಹೋಮಾಃ ।
ಸಪ್ತ ಇಮೇ ಲೋಕಾ ಯೇಷು ಚರಂತಿ ಪ್ರಾಣಾ
ಗುಹಾಶಯಾ ನಿಹಿತಾಃ ಸಪ್ತ ಸಪ್ತ ॥ ೮ ॥

ತಸ್ಮಾತ್ = ಆ ಪುರುಷನಿಂದ ಸಪ್ತ ಪ್ರಾಣಾಃ = ಏಳು ಪ್ರಾಣಗಳು ಸಪ್ತ ಅರ್ಚಿಷಃ = ಏಳು ಅರ್ಚಿಗಳು ಸಪ್ತ ಸಮಿಧಃ = ಏಳು ಸಮಿತ್ತುಗಳು ಸಪ್ತ ಹೋಮಾಃ = ಏಳು ಹೋಮಗಳು ಯೇಷು = ಯಾವುವುಗಳಲ್ಲಿ ಸಪ್ತ ಸಪ್ತ ನಿಹಿತಾಃ = ಏಳು ಏಳಾಗಿ ಇಟ್ಟಿರುವ ಗುಹಾಶಯಾಃ = ಹೃದಯದಲ್ಲಿರುವ ಪ್ರಾಣಾಃ = ಪ್ರಾಣಗಳು ಚರಂತಿ = ಸಂಚರಿಸುವುವೊ [ತೇ] ಇಮೇ = ಈ ಸಪ್ತ ಲೋಕಾಃ = ಏಳು ಲೋಕಗಳು ಪ್ರಭವಂತಿ = ಉಂಟಾಗುತ್ತವೆ.

೮. ಏಳು ಪ್ರಾಣಗಳೂ, ಏಳು ಅರ್ಚಿಗಳು,[1] ಏಳು ಸಮಿತ್ತುಗಳು,[2] ಏಳು ಹೋಮಗಳು,[3] ಯಾವುವುಗಳಲ್ಲಿ[4] ಏಳೇಳಾಗಿ ಹೃದಯದಲ್ಲಿರುವ ಪ್ರಾಣಗಳು ಸಂಚರಿಸುವುವೊ ಆ ಈ ಏಳು ಲೋಕಗಳು[5] ಆ ಪುರುಷನಿಂದಲೇ[6] ಉಂಟಾಗುತ್ತವೆ.

[[1] ತಮ್ಮ ವಿಷಯಗಳನ್ನು ಬೆಳಗುವ ದೀಪ್ತಿಗಳು.
[2] ಪ್ರಾಣಗಳು ಹತ್ತಿಕೊಂಡು ಉರಿಯುವ ಏಳು ವಿಷಯಗಳು.
[3] ವಿಷಯಗಳ ಜ್ಞಾನಗಳು.
[4] ಪ್ರತಿಯೊಂದು ಪ್ರಾಣಿಯಲ್ಲಿಯೂ.
[5] ಇಂದ್ರಿಯ ಸ್ಥಾನಗಳು.
[6] ಜ್ಞಾನಿಗಳು ಮತ್ತು ಅಜ್ಞಾನಿಗಳ ಕರ್ಮಗಳು, ಅವುಗಳ ಸಾಧನಗಳು, ಫಲಗಳು—ಇವೆಲ್ಲವೂ ಸರ್ವಜ್ಞನಾದ ಪರಮ ಪುರುಷನಿಂದಲೇ ಉಂಟಾಗಿವೆ ಎಂಬುದು ಪ್ರಕರಣಾರ್ಥ.]

ಅತಃ ಸಮುದ್ರಾ ಗಿರಯಶ್ಚ ಸರ್ವೇಽ-
ಸ್ಮಾತ್ ಸ್ಯಂದಂತೇ ಸಿಂಧವಃ ಸರ್ವರೂಪಾಃ ।
ಅತಶ್ಚ ಸರ್ವಾ ಓಷಧಯೋ ರಸಶ್ಚ
ಯೇನೈಷ ಭೂತೈಸ್ತಿಷ್ಠತೇ ಹ್ಯಂತರಾತ್ಮಾ ॥ ೯ ॥

ಅತಃ = ಈ ಪುರುಷನಿಂದಲೇ ಸರ್ವೇ = ಎಲ್ಲ ಸಮುದ್ರಾಃ = ಸಮುದ್ರಗಳು ಗಿರಯಃ ಚ = ಗಿರಿಗಳು [ಉಂಟಾಗಿರುವುವು] ; ಅಸ್ಮಾತ್ = ಇವನಿಂದ ಸರ್ವರೂಪಾಃ = ಬಹುರೂಪವಾದ ಸಿಂಧವಃ = ನದಿಗಳು ಸ್ಯಂದಂತೇ = ಹರಿಯುತ್ತವೆ : ಚ = ಮತ್ತು ಅತಃ = ಇವನಿಂದಲೇ ಸರ್ವಾಃ = ಎಲ್ಲ ಓಷಧಯಃ = ವ್ರೀಹಿಯವಾದಿಗಳೂ ರಸಃ=ಚ ಮತ್ತು ರಸವು [ಆಗಿರುವುವು[; ಯೇನ = ಯಾವ ರಸದಿಂದ ಏಷಃ=ಈ ಅಂತರಾತ್ಮಾ= ಅಂತರಾತ್ಮನು ಭೂತೈಃ = ಪಂಚ ಸ್ಥೂಲಭೂತಗಳೊಡನೆ ತಿಷ್ಠತೇ ಹಿ = ನಿಂತಿರುವನು.

೯. ಈ ಪುರುಷನಿಂದಲೇ ಎಲ್ಲ ಪರ್ವತಗಳು ಸಮುದ್ರಗಳು (ಉಂಟಾಗಿರುವುವು) ; ಇವನಿಂದಲೇ ಬಹುರೂಪವಾದ ನದಿಗಳು ಹರಿಯುವುವು ಮತ್ತು

ಇವನಿಂದಲೇ ಎಲ್ಲ ವ್ರೀಹಿಯವಾದಿಗಳೂ ರಸವೂ ಆಗಿರುವುವು. ಈ ರಸದಿಂದಲೇ ಈ ಅಂತರಾತ್ಮನು[1] ಪಂಚಸ್ಥೂಲಭೂತಗಳೊಡನೆ ನಿಂತಿರುವನು.

[[1] ಶರೀರಕ್ಕೂ ಆತ್ಮನಿಗೂ ಮಧ್ಯೆ ಆತ್ಮನಂತೆ ಇರುವ ಸೂಕ್ಷ್ಮಶರೀರ]

ಪುರುಷ ಏವೇದಂ ವಿಶ್ವಂ ಕರ್ಮ
ತಪೋ ಬ್ರಹ್ಮ ಪರಾಮೃತವತ್ ।
ಏತದ್ಯೋ ವೇದ ನಿಹಿತಂ ಗುಹಾಯಾಂ
ಸೋಽವಿದ್ಯಾಗ್ರಂಥಿಂ ವಿಕರತೀಹ ಸೋಮ್ಯ　　॥ ೧೦ ॥

ಕರ್ಮ = ಕರ್ಮ ತಪಃ = ತಪಸ್ಸು ಇದಂ ವಿಶ್ವಂ = ಇದೆಲ್ಲವೂ ಪುರುಷಃ ಏವ = ಪುರುಷನೇ. [ಸರ್ವಂ=ಎಲ್ಲವೂ] ಪರಾಮೃತಂ=ಪರಮಾಮೃತವಾದ ಬ್ರಹ್ಮ=ಬ್ರಹ್ಮವು ಸೋಮ್ಯ = ಹೇ ಸೋಮ್ಯನೆ, ಯಃ = ಯಾವನು ಗುಹಾಯಾಂ = ಹೃದಯದಲ್ಲಿ ನಿಹಿತಂ=ಇರುವ ಏತತ್=ಇದನ್ನು ವೇದ=ಅರಿತುಕೊಳ್ಳುವನೊ ಸಃ = ಅವನು ಇಹ= ಇಲ್ಲಿಯೇ ಅವಿದ್ಯಾಗ್ರಂಥಿಂ = ಅವಿದ್ಯಾಗ್ರಂಥಿಯನ್ನು ವಿಕರತಿ = ನಾಶಮಾಡುತ್ತಾನೆ.

೧೦. ಕರ್ಮ[1] ತಪಸ್ಸು—ಇವೆಲ್ಲವೂ ಪುರುಷನೇ,[2] (ಎಲ್ಲವೂ) ಪರಮಾಮೃತವಾದ ಬ್ರಹ್ಮ. ಹೃದಯದಲ್ಲಿರುವ ಇದನ್ನು ಹೇ ಸೋಮ್ಯ, ಯಾವನು ಅರಿತುಕೊಳ್ಳುವನೊ[3] ಅವನು ಅವಿದ್ಯಾಗ್ರಂಥಿಯನ್ನು[4] ಇಲ್ಲಿಯೇ[5] ನಾಶಮಾಡುತ್ತಾನೆ.

[[1] ಅಗ್ನಿಹೋತ್ರವೇ ಮೊದಲಾದುವು ಕರ್ಮ, ಅದರಿಂದುಂಟಾಗುವ ಜ್ಞಾನವು ತಪಸ್ಸು.

[2] 'ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ' (೧, ೧, ೩) ಎಂದು ಹಿಂದೆ ಕೇಳಿದ ಪ್ರಶ್ನೆಗೆ ಇದು ಉತ್ತರ.

[3] 'ನಾನೇ' ಎಂದು.

[4] ಗ್ರಂಥಿಯಂತೆ ದೃಢವಾಗಿರುವ ಅವಿದ್ಯಾವಾಸನೆ.

[5] ಬದುಕಿರುವಾಗಲೇ.]

ಎರಡನೆಯ ಖಂಡ

ಆವಿಃ ಸಂನಿಹಿತಂ ಗುಹಾಚರಂ ನಾಮ
ಮಹತ್ಪದಮತ್ರೈತತ್ ಸಮರ್ಪಿತಮ್ ।
ಏಜತ್ಪ್ರಾಣನ್ನಿಮಿಷಚ್ಚ ಯದೇತಜ್ಜಾನಥ ಸದ-
ಸದ್ವರೇಣ್ಯಂ ಪರಂ ವಿಜ್ಞಾನಾದ್ಯದ್ವರಿಷ್ಠಂ ಪ್ರಜಾನಾಮ್ ॥ ೧ ॥

[ಬ್ರಹ್ಮ=ಬ್ರಹ್ಮವು] ಆವಿಃ=ಪ್ರಕಾಶಮಾನವಾಗಿ ಸಂನಿಹಿತಂ=ಸಮೀಪವರ್ತಿಯಾಗಿ ಗುಹಾಚರಂ ನಾಮ = ಹೃದಯದಲ್ಲಿ ಸಂಚರಿಸುತ್ತಿರುವುದು. [ಇದಂ = ಇದು] ಮಹತ್ ಪದಂ = ಮಹಾ ಆಶ್ರಯವು. ಅತ್ರ = ಇದರಲ್ಲಿ ಏಜತ್ = ಚಲಿಸುವ ಪಕ್ಷಿಯೇ ಮೊದಲಾದವು ಪ್ರಾಣತ್ = ಉಸಿರಾಡುವ ಮನುಷ್ಯಪಶ್ವಾದಿಗಳು ನಿಮಿಷತ್ ಚ = ಕಣ್ಣು ಮಿಟಕಿಸುವ ಇತರ ಪ್ರಾಣಿಗಳು ಯತ್ ಏತತ್ [ಸರ್ವಂ] = ಯಾವ ಇದೆಲ್ಲವೂ ಸಮರ್ಪಿತವಾಗಿದೆ. ಯತ್ = ಯಾವ ಏತತ್ = ಇದನ್ನು ಸದಸತ್ = ಮೂರ್ತಾಮೂರ್ತಗಳೆಂದೂ ವರೇಣ್ಯಂ = ವರಣೀಯವೆಂದೂ ಪ್ರಜಾನಾಂ = ಜನರ ವಿಜ್ಞಾನಾತ್ = ಜ್ಞಾನಕ್ಕಿಂತ ಪರಂ = ಬೇರೆ ಎಂದೂ ವರಿಷ್ಠಂ = ಪರಮಶ್ರೇಷ್ಠವೆಂದೂ ಜಾನಥ = ತಿಳಿದುಕೊಳ್ಳಿರಿ.

೧. (ಬ್ರಹ್ಮವು) ಪ್ರಕಾಶಿಸುತ್ತ[1] ಸಮೀಪವರ್ತಿಯಾಗಿ ಹೃದಯದಲ್ಲಿ ಸಂಚರಿಸುತ್ತಿರುವುದು;[2] (ಇದು) ಮಹಾ ಆಶ್ರಯವು[3]. ಇದರಲ್ಲಿ ಚಲಿಸುವ ಉಸಿರಾಡುವ ಕಣ್ಣುಮಿಟಕಿಸುವ ಸಮಸ್ತ ಪ್ರಾಣಿಸಮೂಹವೂ ಸಮರ್ಪಿತವಾಗಿರುತ್ತದೆ. ಇದನ್ನು ಮೂರ್ತಾಮೂರ್ತವೆಂದೂ, ವರಣೀಯವೆಂದೂ, ಜನರ ಜ್ಞಾನಕ್ಕಿಂತ ಬೇರೆಯೆಂದೂ, ಪರಮಶ್ರೇಷ್ಠವೆಂದೂ[4] ತಿಳಿದುಕೊಳ್ಳಿರಿ.

[[1] ಶಬ್ದಾದಿ ವಿಷಯಗಳನ್ನು ಅರಿಯುತ್ತಿರುವಂತೆ ಭಾಸವಾಗುತ್ತದೆ.
[2] ದರ್ಶನಶ್ರವಣಾದಿಪ್ರಕಾರಗಳಿಂದ.
[3] ಸರ್ವಪದಗಳಿಗೂ ಅರ್ಥಗಳಿಗೂ.
[4] ಯಾವ ದೋಷಗಳೂ ಇಲ್ಲದಿರುವುದರಿಂದ.]

ಯದರ್ಚಿಮದ್ಯದಣುಭ್ಯೋಽಣು ಚ
ಯಸ್ಮಿಂಲ್ಲೋಕಾ ನಿಹಿತಾ ಲೋಕಿನಶ್ಚ ।
ತದೇತದಕ್ಷರಂ ಬ್ರಹ್ಮ ಸ ಪ್ರಾಣಸ್ತದು ವಾಙ್ಮನಃ
ತದೇತತ್ಸತ್ಯಂ ತದಮೃತಂ ತದ್ವೇದ್ಧವ್ಯಂ ಸೋಮ್ಯ ವಿದ್ಧಿ ॥ ೨ ॥

ಯತ್ ಅರ್ಚಿಮತ್ = ಯಾವುದು ದೀಪ್ತಿಯುಳ್ಳದ್ದೊ. ಯತ್ = ಯಾವುದು ಅಣುಭ್ಯಃ = ಅಣುಗಳಿಗಿಂತ ಅಣು ಚ = ಸೂಕ್ಷ್ಮವಾಗಿರುವುದೊ ಯಸ್ಮಿನ್ = ಯಾವುದರಲ್ಲಿ ಲೋಕಾಃ = ಲೋಕಗಳು ಲೋಕಿನಃ ಚ = ಲೋಕದಲ್ಲಿರುವವರು ನಿಹಿತಾಃ = ಸಮರ್ಪಿತರಾಗಿರುವರೊ ತತ್ ಏತತ್ = ಆ ಇದು ಅಕ್ಷರಂ ಬ್ರಹ್ಮ = ಅಕ್ಷರ ಬ್ರಹ್ಮ. ಸಃ ಪ್ರಾಣಃ = ಅದೇ ಪ್ರಾಣವು. ತತ್ ಉ ವಾಙ್ಮನಃ=ಅದೇ ವಾಙ್ಮನಸ್ಸುಗಳು ತತ್ ಏತತ್=ಆ ಇದು ಸತ್ಯಂ=ಸತ್ಯವು ತತ್ ಅಮೃತಂ = ಅದು ಅಮೃತವು ; ಸೋಮ್ಯ = ಹೇ ಸೋಮ್ಯನೆ ತತ್=ಅದು ವೇದ್ಧವ್ಯಂ=ಹೊಡೆಯಲ್ಪಡತಕ್ಕದ್ದು. ವಿದ್ಧಿ=ಹೊಡೆ.

೨. ಯಾವುದು ದೀಪ್ತಿಯುಳ್ಳದ್ದೊ, ಯಾವುದು ಅಣುಗಳಿಗಿಂತಲೂ ಸೂಕ್ಷ್ಮವಾಗಿರುವುದೊ, ಯಾವುದರಲ್ಲಿ ಲೋಕಗಳು ಲೋಕದಲ್ಲಿರುವವರು ಸಮರ್ಪಿತರಾಗಿರುವರೊ ಆ ಇದು ಅಕ್ಷರ ಬ್ರಹ್ಮ, ಅದೇ ಪ್ರಾಣ, ಅದೇ ವಾಙ್ಮನಸ್ಸುಗಳು, ಆ ಇದು ಸತ್ಯ. ಅದೇ ಅಮೃತ. ಹೇ ಸೋಮ್ಯ, ಅದೇ ಹೊಡೆಯಲ್ಪಡತಕ್ಕದ್ದು.[1] (ಅದನ್ನು) ಹೊಡೆ.[2]

[[1] ಅದರಲ್ಲಿ ಮನಸ್ಸನ್ನು ಸಮಾಧಾನಮಾಡಬೇಕು.
[2] ಆ ಲಕ್ಷ್ಯದಲ್ಲಿ ಚಿತ್ತವನ್ನು ನಿಲ್ಲಿಸು.]

ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ
ಶರಂ ಹ್ಯುಪಾಸಾನಿಶಿತಂ ಸಂದಧೀತ ।
ಆಯಮ್ಯ ತದ್ಭಾವಗತೇನ ಚೇತಸಾ
ಲಕ್ಷ್ಯಂ ತದೇವಾಕ್ಷರಂ ಸೋಮ್ಯ ವಿದ್ಧಿ ॥ ೩ ॥

ಸೋಮ್ಯ=ಹೇ ಸೋಮ್ಯನೆ. ಔಪನಿಷದಂ=ಉಪನಿಷತ್ತುಗಳಲ್ಲಿರುವ ಮಹಾಸ್ತ್ರಂ= ಮಹಾಸ್ತ್ರವಾದ ಧನುಃ=ಧನುಸ್ಸನ್ನು ಗೃಹೀತ್ವಾ=ತೆಗೆದುಕೊಂಡು ಉಪಾಸಾನಿಶಿತಂ= ನಿರಂತರ ಧ್ಯಾನದಿಂದ ಹರಿತವಾದ ಶರಂ = ಬಾಣವನ್ನು ಸಂದಧೀತ = ಜೋಡಿಸಬೇಕು. ಆಯಮ್ಯ = ಎಳೆದುಕೊಂಡು ತದ್ಭಾವಗತೇನ = ಅದರ ಭಾವನೆಯಲ್ಲಿ ಲೀನವಾದ ಚೇತಸಾ = ಚಿತ್ತದಿಂದ ಲಕ್ಷ್ಯಂ = ಲಕ್ಷ್ಯವಾದ ತತ್ ಏವ ಅಕ್ಷರಂ = ಆ ಅಕ್ಷರವನ್ನೇ ವಿದ್ಧಿ = ಹೊಡೆ.

೩. ಹೇ ಸೋಮ್ಯ, ಉಪನಿಷತ್ತುಗಳಲ್ಲಿರುವ ಮಹಾಸ್ತ್ರವಾದ ಧನುಸ್ಸನ್ನು ತೆಗೆದುಕೊಂಡು ನಿರಂತರ ಧ್ಯಾನದಿಂದ ಹರಿತವಾಗಿರುವ[1] ಬಾಣವನ್ನು ಜೋಡಿಸಬೇಕು. ಎಳೆದುಕೊಂಡು[2] ಅದರ[3] ಭಾವನೆಯಲ್ಲಿ ಲೀನವಾದ ಚಿತ್ತದಿಂದ ಲಕ್ಷ್ಯವಾದ ಆ ಅಕ್ಷರವನ್ನೇ ಹೊಡೆ!

[ಗುರಿಯನ್ನು ಹೇಗೆ ಹೊಡೆಯಬೇಕು ಎಂದು ಈ ಮಂತ್ರವು ತಿಳಿಸುತ್ತದೆ
[1] ಸಸಂಸ್ಕಾರವನ್ನು ಪಡೆದಿರುವ.
[2] ಇಂದ್ರಿಯಗಳ ಸಹಿತ ಅಂತಃಕರಣವನ್ನು ತನ್ನ ವಿಷಯಗಳಿಂದ ಹಿಂತೆಗೆದು.
[3] ಬ್ರಹ್ಮದ.]

ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥ ೪ ॥

ಪ್ರಣವಃ = ಓಂಕಾರವು ಧನುಃ = ಧನುಸ್ಸು. ಆತ್ಮಾ ಹಿ = ಆತ್ಮನೇ ಶರಃ = ಬಾಣವು. ಬ್ರಹ್ಮ = ಬ್ರಹ್ಮವು ತಲ್ಲಕ್ಷ್ಯಂ = ಅದರ ಲಕ್ಷ್ಯವೆಂದು ಉಚ್ಯತೇ = ಹೇಳಲ್ಪಡುತ್ತದೆ; ಅಪ್ರಮತ್ತೇನ = ಪ್ರಮತ್ತನಾಗದೆ ವೇದ್ಧವ್ಯಂ = ಹೊಡೆಯಬೇಕು. ಶರವತ್ = ಬಾಣದಂತೆ ತನ್ಮಯಃ ಭವೇತ್ = ತನ್ಮಯನಾಗಬೇಕು.

೪. ಓಂಕಾರವು ಧನುಸ್ಸು,[1] ಆತ್ಮನೇ ಬಾಣ.[2] ಬ್ರಹ್ಮವು ಅದರ ಲಕ್ಷ್ಯವೆಂದು ಹೇಳಲ್ಪಡುತ್ತದೆ. ಪ್ರಮತ್ತನಾಗದೆ[3] ಹೊಡೆಯಬೇಕು.[4] ಬಾಣದಂತೆ ತನ್ಮಯನಾಗಬೇಕು.[5]

[[1] ಆತ್ಮನೆಂಬ ಬಾಣವು ಅಕ್ಷರವೆಂಬ ಲಕ್ಷ್ಯದಲ್ಲಿ ಸೇರಲು ಓಂಕಾರವು ಕಾರಣವಾಗಿರುತ್ತದೆ. ಏಕೆಂದರೆ ಪ್ರಣವದ ಅಭ್ಯಾಸದಿಂದ ಸಂಸ್ಕಾರವುಳ್ಳವನಾಗಿ, ಅದನ್ನೇ ಅವಲಂಬಿಸಿಕೊಂಡು ಯಾವ ಪ್ರತಿಬಂಧವೂ ಇಲ್ಲದೆ ಅಕ್ಷರವನ್ನು ಸೇರುತ್ತಾನೆ.

[2] ಈ ಶರೀರವನ್ನು ಪ್ರವೇಶಿಸಿ ಬುದ್ಧಿಯ ಸಮಸ್ತ ಪ್ರತ್ಯಯಗಳಿಗೂ ಸಾಕ್ಷಿಯಾಗಿರುವ ಉಪಾಧಿಲಕ್ಷಣನಾದ ಪರಮಾತ್ಮ. ಅವನು ಬಾಣದಂತೆ ತನ್ನ ಆತ್ಮನಾದ ಅಕ್ಷರಬ್ರಹ್ಮದಲ್ಲಿಯೇ ಅರ್ಪಿತನಾಗಿರುತ್ತಾನೆ.

[3] ಬಾಹ್ಯವಿಷಯಗಳಲ್ಲಿರುವ ತೃಷ್ಣೆ ಎಂಬ ಪ್ರಮಾದವನ್ನು ಬಿಟ್ಟು, ಸರ್ವತಃ ವಿರಕ್ತನಾಗಿ, ಜಿತೇಂದ್ರಿಯನಾಗಿ, ಏಕಾಗ್ರಚಿತ್ತನಾಗಿ.

[4] ಬ್ರಹ್ಮವೆಂಬ ಲಕ್ಷ್ಯವನ್ನು.

[5] ದೇಹಾದಿಗಳು ತಾನು ಎಂಬ ಬುದ್ಧಿಯನ್ನು ಬಿಟ್ಟು ಅಕ್ಷರೈಕಾತ್ಮವೆಂಬ ಫಲವನ್ನು ಹೊಂದಬೇಕು.]

ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷ-
ಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ ।
ತಮೇವೈಕಂ ಜಾನಥ ಆತ್ಮಾನ-
ಮನ್ಯಾ ವಾಚೋ ವಿಮುಂಚಥಾಮೃತಸ್ಯೈಷ ಸೇತುಃ ॥ ೫ ॥

ಯಸ್ಮಿನ್=ಯಾವನಲ್ಲಿ ದ್ಯೌಃ=ದ್ಯುಲೋಕವೂ ಪೃಥಿವೀ=ಪೃಥ್ವಿಯೂ ಅಂತರಿಕ್ಷಂ ಚ=ಅಂತರಿಕ್ಷವೂ ಸರ್ವೈಃ ಪ್ರಾಣೈಃ ಚ ಸಹ=ಎಲ್ಲ ಪ್ರಾಣಗಳೊಡನೆ ಮನಃ=ಮನಸ್ಸೂ ಓತಂ=ಸಮರ್ಪಿತವಾಗಿರುವುದೊ ತಂ ಏಕಂ ಆತ್ಮಾನಂ ಏವ=ಆ ಆತ್ಮನೊಬ್ಬನನ್ನೇ ಜಾನಥ=ತಿಳಿದುಕೊಳ್ಳಿರಿ. ಅನ್ಯಾಃ=ಬೇರೆ ವಾಚಃ=ಮಾತುಗಳನ್ನು ವಿಮುಂಚಥ=ಬಿಡಿರಿ: ಏಷಃ=ಇದು ಅಮೃತಸ್ಯ=ಅಮೃತಕ್ಕೆ ಸೇತುಃ=ಸೇತು.

೫. ದ್ಯುಲೋಕ ಪೃಥ್ವಿ ಅಂತರಿಕ್ಷ ಎಲ್ಲ ಪ್ರಾಣಗಳ ಸಹಿತ ಮನಸ್ಸು ಇವೆಲ್ಲವೂ ಯಾವನಲ್ಲಿ[1] ಸಮರ್ಪಿತವಾಗಿರುವುದೊ ಆ ಆತ್ಮನೊಬ್ಬನನ್ನೇ[2] ತಿಳಿದುಕೊಳ್ಳಿರಿ, ಬೇರೆ ಮಾತುಗಳನ್ನು[3] ಬಿಡಿರಿ : ಇದು[4] ಅಮೃತಕ್ಕೆ[5] ಸೇತು.[6]

[[1] ಅಕ್ಷರಪುರುಷನಲ್ಲಿ.
[2] ನಿಮ್ಮ ಮತ್ತು ಸರ್ವಪ್ರಾಣಿಗಳ ಪ್ರತ್ಯಕ್ಸ್ವರೂಪನಾದ.
[3] ಅಪರವಿದ್ಯಾರೂಪವಾದ ಮಾತುಗಳು ಮತ್ತು ಅವುಗಳಿಂದ ಪ್ರಕಾಶವಾಗುವ ಸಾಧನಸಮೇತವಾದ ಸರ್ವಕರ್ಮಗಳು.
[4] ಈ ಆತ್ಮಜ್ಞಾನ.
[5] ಮೋಕ್ಷಪ್ರಾಪ್ತಿಗೆ.
[6] ಸಂಸಾರಮಹೋದಧಿಯನ್ನು ದಾಟಲು ಸೇತುವಿನಂತೆ ಇರುವುದರಿಂದ.]

ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ
ಸ ಏಷೋಽಂತಶ್ಚರತೇ ಬಹುಧಾ ಜಾಯಮಾನಃ ।
ಓಮಿತ್ಯೇವಂ ಧ್ಯಾಯಥ ಆತ್ಮಾನಂ
ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್ ॥ ೬ ॥

ರಥನಾಭೌ=ರಥಚಕ್ರದ ಗುಂಬದಲ್ಲಿ ಅರಾಃ ಇವ=ಅರೆಕಾಲುಗಳಂತೆ ಯತ್ರ=ಎಲ್ಲಿ ನಾಡ್ಯಃ=ನಾಡಿಗಳು ಸಂಹತಾಃ=ಸೇರಿರುವವೊ [ತತ್ರ=ಅಲ್ಲಿ]ಸಃ ಏಷಃ=ಆ ಈ[ಆತ್ಮನು] ಬಹುಧಾ ಜಾಯಮಾನಃ=ಬಹುವಿಧವಾಗಿ ಹುಟ್ಟುತ್ತ ಅಂತಃ=ಒಳಗೆ ಚರತೇ=ಸಂಚರಿಸುತ್ತಿರುವನು. ಓಂ ಇತಿ=ಓಂ ಎಂದು ಏವಂ=ಹೀಗೆ ಆತ್ಮಾನಂ=ಆತ್ಮನನ್ನು ಧ್ಯಾಯಥ=ಧ್ಯಾನಿಸಿ. ತಮಸಃ=ತಮಸ್ಸಿನ ಪರಸ್ತಾತ್=ಆಚೆ ಇರುವ ಪಾರಾಯ=ದಡಕ್ಕೆ [ದಾಟಲು] ವಃ=ನಿಮಗೆ ಸ್ವಸ್ತಿ=ಮಂಗಳವಾಗಲಿ.

೬. ರಥಚಕ್ರದ ಗುಂಬದಲ್ಲಿ ಅರೆಕಾಲುಗಳು ಸೇರಿಕೊಂಡಿರುವಂತೆ ಎಲ್ಲಿ[1] ನಾಡಿಗಳು[2] ಬಂದು ಸೇರಿರುವವೊ (ಅಲ್ಲಿ) ಆ ಈ (ಆತ್ಮನು)[3] ಬಹು ವಿಧವಾಗಿ ಹುಟ್ಟುತ್ತ[4] ಸಂಚರಿಸುತ್ತಿರುವನು. ಓಂ ಎಂದು ಹೀಗೆ[5] ಆತ್ಮನನ್ನು ಧ್ಯಾನಿಸಿ. ತಮಸ್ಸಿನ[6] ಆಚೆ ಇರುವ ದಡಕ್ಕೆ (ದಾಟಲು) ನಿಮಗೆ ಮಂಗಳವಾಗಲಿ.[7]

[¹ ಹೃದಯದಲ್ಲಿ.
² ಸರ್ವತಃ ದೇಹವ್ಯಾಪಿಗಳಾದ.
³ ಬುದ್ಧಿಯ ಪ್ರತ್ಯಯಗಳಿಗೆ ಸಾಕ್ಷಿಯಾಗಿ.
⁴ ನೋಡುತ್ತ, ಕೇಳುತ್ತ, ಚಿಂತಿಸುತ್ತ, ಅರಿಯುತ್ತ, [illegible] ಬಹುವಿಧವಾಗಿ [illegible] ಎಂದು ಹೇಳಿದೆ.
⁵ ಒಬ್ಬರೆ ಹೇಳಿದ [illegible].
⁶ ಅವಿದ್ಯಾಕೃತವಾದ [illegible] [illegible] [illegible] ದಾಟಿದಲು.
⁷ ಯಾವ ವಿಘ್ನವೂ ಇಲ್ಲದಂತಾಗಲಿ.]

ಯಃ ಸರ್ವಜ್ಞಃ ಸರ್ವವಿದ್ಯಸ್ಯೈಷ ಮಹಿಮಾ ಭುವಿ ।
ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಪ್ರತಿಷ್ಠಿತಃ ॥ ೭ ॥

ಯಃ=ಯಾವನು ಸರ್ವಜ್ಞಃ=ಸರ್ವಜ್ಞನೋ ಸರ್ವವಿತ್=ಸರ್ವವಿದನೋ, ಯಸ್ಯ= ಯಾವನಿಗೆ ಭುವಿ=ಭೂಮಿಯಲ್ಲಿ ಏಷಃ=ಇದು ಮಹಿಮಾ=ವಿಭೂತಿಯೋ ಏಷ ಆತ್ಮಾ ಹಿ=ಈ ಆತ್ಮನು ದಿವ್ಯೇ=ದಿವ್ಯವಾದ ಬ್ರಹ್ಮಪುರೇ=ಬ್ರಹ್ಮಪುರದಲ್ಲಿ ವ್ಯೋಮ್ನಿ= ಆಕಾಶದಲ್ಲಿ ಪ್ರತಿಷ್ಠಿತಃ=ಪ್ರತಿಷ್ಠಿತನಾಗಿರುತ್ತಾನೆ.

೭. ಯಾವನು ಸರ್ವಜ್ಞನೋ ಸರ್ವವಿದನೋ.[1] ಯಾವನಿಗೆ ಭೂಮಿಯಲ್ಲಿ ಇದು ವಿಭೂತಿಯೋ ಆ ಆತ್ಮನು ದಿವ್ಯವಾದ[2] ಬ್ರಹ್ಮಪುರದ[3] ಆಕಾಶದಲ್ಲಿ ಪ್ರತಿಷ್ಠಿತನಾಗಿರುತ್ತಾನೆ.

[¹ ೧, ೧, ೯ರ ೧, ೨ ಟಿಪ್ಪಣಿಗಳನ್ನು ನೋಡಿ.
² ಎಲ್ಲ ಬುದ್ಧಿಯ ಪ್ರತ್ಯಯಗಳಿಂದ ಉಂಟಾದ ಪ್ರಕಾಶವುಳ್ಳ.
³ ಬ್ರಹ್ಮವು ಚೈತನ್ಯರೂಪದಿಂದ ನಿತ್ಯವೂ ಅಭಿವ್ಯಕ್ತವಾಗುವುದರಿಂದ ಹೃದಯ ಪುಂಡರೀಕವು ಬ್ರಹ್ಮಪುರವೆನಿಸುತ್ತದೆ.]

ಮನೋಮಯಃ ಪ್ರಾಣಶರೀರನೇತಾ
ಪ್ರತಿಷ್ಠಿತೋಽನ್ನೇ ಹೃದಯಂ ಸಂನಿಧಾಯ ।
ತದ್ವಿಜ್ಞಾನೇನ ಪರಿಪಶ್ಯಂತಿ ಧೀರಾ
ಆನಂದರೂಪಮಮೃತಂ ಯದ್ವಿಭಾತಿ ॥ ೮ ॥

[ಸಃ ಆತ್ಮಾ=ಆ ಆತ್ಮನು] ಮನೋಮಯಃ=ಮನೋಮಯನು ಪ್ರಾಣಶರೀರ ನೇತಾ=ಪ್ರಾಣವೆಂಬ ಶರೀರದ ನೇತೃ. ಹೃದಯಂ=ಬುದ್ಧಿಯನ್ನು ಸಂನಿಧಾಯ=ಸಾ

ಯಾಗಿ ಇಟ್ಟು ಅನ್ನೇ=ಅನ್ನದಲ್ಲಿ ಪ್ರತಿಷ್ಠಿತಃ=ಪ್ರತಿಷ್ಠಿತನಾಗಿರುತ್ತಾನೆ ಯತ್=ಯಾವ ಆನಂದರೂಪಂ=ಆನಂದರೂಪವಾದ ಅಮೃತಂ=ಅಮೃತವು ವಿಭಾತಿ=ಪ್ರಕಾಶಿಸುತ್ತಿರುವುದೊ ತತ್=ಅದನ್ನು ಧೀರಾಃ=ಧೀರರು ವಿಜ್ಞಾನೇನ=ವಿಜ್ಞಾನದಿಂದ ಪರಿಪಶ್ಯಂತಿ=ಸರ್ವತಃ ನೋಡುತ್ತಾರೆ.

೮. (ಈ ಆತ್ಮನು) ಮನೋಮಯನು,[1] ಪ್ರಾಣವೆಂಬ ಶರೀರದ ನೇತೃ,[2] ಬುದ್ಧಿಯನ್ನು ಸರಿಯಾಗಿ ಇಟ್ಟು[3] ಅನ್ನದಲ್ಲಿ ಪ್ರತಿಷ್ಠಿತನಾಗಿರುತ್ತಾನೆ. ಯಾವ ಆನಂದರೂಪವಾದ[4] ಅಮೃತವು[5] ಪ್ರಕಾಶಿಸುತ್ತಿರುವುದೊ[6] ಅದನ್ನು ವಿಜ್ಞಾನದ[7] ಮೂಲಕ ಧೀರರು ಸರ್ವತಃ ನೋಡುತ್ತಾರೆ.

[1 ಹೃದಯದಲ್ಲಿಯೇ ಇದ್ದುಕೊಂಡು ಮನೋವೃತ್ತಿಗಳಿಂದಲೇ ತೋರುವುದರಿಂದ ಮನೋಮಯನು : ಮನಸ್ಸೇ ಅವನಿಗೆ ಉಪಾಧಿ.

2 'ಪ್ರಾಣಶ್ಚ ತತ್ ಶರೀರಂ ಚ ಪ್ರಾಣಶರೀರಂ' ಎಂಬ ಪಾಠದ ಪ್ರಕಾರ ಅರ್ಥವನ್ನು ಮಾಡಿದೆ. ಆತ್ಮನು ಪ್ರಾಣಶರೀರವನ್ನು (ಸೂಕ್ಷ್ಮ ಶರೀರ) ಒಂದು ಸ್ಥೂಲ ಶರೀರದಿಂದ ಇನ್ನೊಂದಕ್ಕೆ ಒಯ್ಯುವುದರಿಂದ ನೇತೃ ಎಂದು ಹೇಳಿದೆ.

3 ಬುದ್ಧಿಯ ಮೂಲಕ ಶರೀರದಲ್ಲಿ ಪ್ರಕಾಶಿಸುತ್ತಾನೆ ಎಂದು ಅರ್ಥ : ಏಕೆಂದರೆ ಆತ್ಮನು ಅನ್ನಕಾರ್ಯವಾದ ಶರೀರದಲ್ಲಿ ನಿಲ್ಲುವುದಿಲ್ಲ.

4 ಸರ್ವಾನರ್ಥದುಃಖಗಳ ಆಯಾಸವಿಲ್ಲದ.

5 ವಿಶೇಷವಾಗಿ ತಮ್ಮ ಆತ್ಮನಲ್ಲಿಯೇ.

6 ಬ್ರಹ್ಮವು.

7 ಶಾಸ್ತ್ರ ಆಚಾರ್ಯ ಇವರ ಉಪದೇಶದಿಂದ ಉಂಟಾದ ಮತ್ತು ಶಮದಮಾದಿಗಳಿಂದ ಉದ್ಭೂತವಾದ ವಿಶಿಷ್ಟ ಜ್ಞಾನದಿಂದ.]

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥ ೮ ॥

ತಸ್ಮಿನ್ ಪರಾವರೇ=ಆ ಪರಾವರಗಳು ದೃಷ್ಟೇ=ಸಾಕ್ಷಾತ್ಕರಿಸಲ್ಪಟ್ಟರೆ ಅಸ್ಯ=ಇವನ ಹೃದಯಗ್ರಂಥಿಃ=ಹೃದಯಗ್ರಂಥಿಯು ಭಿದ್ಯತೇ=ನಾಶವಾಗುತ್ತದೆ. ಸರ್ವಸಂಶಯಾಃ=ಎಲ್ಲ ಸಂಶಯಗಳು ಛಿದ್ಯಂತೇ=ಛಿನ್ನವಾಗುತ್ತವೆ. ಕರ್ಮಾಣಿ ಚ=ಕರ್ಮಗಳೂ ಕ್ಷೀಯಂತೇ=ಕ್ಷೀಣವಾಗುವುವು.

೮. ಆ ಪರಾವರಗಳು[1] ಸಾಕ್ಷಾತ್ಕರಿಸಲ್ಪಟ್ಟರೆ[2] ಇವನ ಹೃದಯಗ್ರಂಥಿಯು[3] ನಾಶವಾಗುತ್ತದೆ. ಸರ್ವಸಂಶಯಗಳು[4] ಛಿದ್ರವಾಗುವುವು. ಕರ್ಮಗಳು[5] ಕ್ಷೀಣವಾಗುವುವು.

[¹ ಕಾರ್ಯರೂಪದಿಂದ 'ಪರ' ಕಾರಣರೂಪದಿಂದ 'ಅವರ' ಎಂದು ಬ್ರಹ್ಮವನ್ನು.
² 'ಅಹಮಸ್ಮಿ' ಎಂದು.
³ ಬುದ್ಧಿಯನ್ನು ಆಶ್ರಯಿಸಿರುವ ಕಾಮಗಳು.
⁴ ಮನುಷ್ಯರಿಗೆ ಸಾಯುವ ವರೆಗೂ ಉಂಟಾಗುವ ಸಂಶಯಗಳು.
⁵ ಜ್ಞಾನೋತ್ಪತ್ತಿಗೆ ಮೊದಲು ಮಾಡಿದ್ದ, ಜನ್ಮಾಂತರಗಳಲ್ಲಿ ಮಾಡಿದ್ದ, ಇನ್ನೂ ಫಲವನ್ನು ಕೊಡಲು ಪ್ರವೃತ್ತವಾಗದಿರುವ ಮತ್ತು ಜ್ಞಾನೋತ್ಪತ್ತಿಯ ಕಾಲದಲ್ಲಿ ಇರುವ ಕರ್ಮಗಳು.]

ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಮ್ ।
ತಚ್ಛುಭ್ರಂಜ್ಯೋತಿಷಾಂಜ್ಯೋತಿಸ್ತದ್ಯದಾತ್ಮವಿದೋವಿದುಃ ॥೧೦॥

ಹಿರಣ್ಮಯೇ=ಹಿರಣ್ಮಯವಾದ ಪರೇ=ಶ್ರೇಷ್ಠವಾದ ಕೋಶೇ=ಕೋಶದಲ್ಲಿ ವಿರಜಂ= ರಜಸ್ಸಿಲ್ಲದ ನಿಷ್ಕಲಂ=ಕಲೆಯಿಲ್ಲದ ಬ್ರಹ್ಮ=ಬ್ರಹ್ಮವು [ವರ್ತತೇ=ಇರುವುದು] ತತ್= ಅದು ಶುಭ್ರಂ=ಶುದ್ಧವು, ಜ್ಯೋತಿಷಾಂ=ಜ್ಯೋತಿಗಳಿಗೆಲ್ಲ ಜ್ಯೋತಿಃ=ಜ್ಯೋತಿಯಾಗಿರುವುದು. ಯತ್ ತತ್=ಯಾವ ಆ ಬ್ರಹ್ಮವನ್ನು ಆತ್ಮವಿದಃ=ಆತ್ಮವಿದರು ವಿದುಃ=ತಿಳಿದಿರುವರು.

೧೦. ಹಿರಣ್ಮಯವೂ¹ ಶ್ರೇಷ್ಠವೂ ಆದ ಕೋಶದಲ್ಲಿ² ರಜಸ್ಸಿಲ್ಲದ³ ಕಲೆಯಿಲ್ಲದ⁴ ಬ್ರಹ್ಮವು (ಇರುವುದು.) ಅದು ಶುದ್ಧವು. ಜ್ಯೋತಿಗಳಿಗೆಲ್ಲ⁵ ಜ್ಯೋತಿಯು ; ಆ ಬ್ರಹ್ಮವನ್ನು ಆತ್ಮವಿದರು⁶ ತಿಳಿದಿರುತ್ತಾರೆ.

[¹ ಬುದ್ಧಿಯ ವಿಜ್ಞಾನದಿಂದ ಪ್ರಕಾಶಿಸುವ.
² ಹೃದಯವು ಆತ್ಮಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ ಸ್ಥಾನವಾಗಿದೆ.
³ ಅವಿದ್ಯಾದಿ ಕಶ್ಮಲವಿಲ್ಲದ.
⁴ ಅವಯವವಿಲ್ಲದ.
⁵ ಎಲ್ಲವನ್ನೂ ಪ್ರಕಾಶಿಸುವ ಅಗ್ನಿ ಮೊದಲಾದುವುಗಳಿಗೆ.
⁶ ಶಬ್ದಾದಿ ವಿಷಯವಾದ ಬುದ್ಧಿಪ್ರತ್ಯಯಗಳಿಗೆ ಸಾಕ್ಷಿಯಾಗಿರುವ ತಮ್ಮ ಆತ್ಮವನ್ನು ತಿಳಿದುಕೊಂಡಿರುವವರು.]

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।
ತಮೇವ ಭಾಂತಮನುಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥ ೧೧ ॥

ತತ್ರ=ಅಲ್ಲಿ ಸೂರ್ಯಃ=ಸೂರ್ಯನು ನ ಭಾತಿ=ಪ್ರಕಾಶಿಸುವುದಿಲ್ಲ. ಚಂದ್ರತಾರಕಂ= ಚಂದ್ರನಕ್ಷತ್ರಗಳು ನ=ಪ್ರಕಾಶಿಸುವುದಿಲ್ಲ, ಇಮಾಃ ವಿದ್ಯುತಃ=ಈ ಮಿಂಚುಗಳು ನ

ಭಾಂತಿ=ಪ್ರಕಾಶಿಸುವುದಿಲ್ಲ ; ಅಯಂ ಅಗ್ನಿಃ ಕುತಃ=ಈ ಅಗ್ನಿಯು ಪ್ರಕಾಶಿಸುವುದೆಲ್ಲಿ ? ತಂ ಏವ ಭಾಂತಂ=ಪ್ರಕಾಶಿಸುತ್ತಿರುವ ಅವನನ್ನೇ ಸರ್ವಂ=ಎಲ್ಲವೂ ಅನುಭಾತಿ=ಅನುಸರಿಸಿ ಪ್ರಕಾಶಿಸುತ್ತಿರುವುದು. ತಸ್ಯ ಭಾಸಾ=ಅವನ ಪ್ರಕಾಶದಿಂದಲೇ ಇದಂ ಸರ್ವಂ=ಇದೆಲ್ಲವೂ ವಿಭಾತಿ=ಪ್ರಕಾಶಿಸುತ್ತಿರುವುದು.

೧೧. ಅಲ್ಲಿ[1] ಸೂರ್ಯನಾಗಲಿ ಚಂದ್ರನಾಗಲಿ ನಕ್ಷತ್ರಗಳಾಗಲಿ ಪ್ರಕಾಶಿಸುವುದಿಲ್ಲ. ಈ ಮಿಂಚುಗಳೂ ಪ್ರಕಾಶಿಸುವುದಿಲ್ಲ : ಈ[2] ಅಗ್ನಿಯು ಪ್ರಕಾಶಿಸುವುದೆಲ್ಲಿ ? ಪ್ರಕಾಶಿಸುತ್ತಿರುವ ಅವನನ್ನೇ ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತಿರುವುವು. ಅವನ ಪ್ರಕಾಶದಿಂದಲೇ ಇದೆಲ್ಲವೂ ಪ್ರಕಾಶಿಸುತ್ತಿರುವುದು.

[[1] ತನ್ನ ಆತ್ಮವಾದ ಬ್ರಹ್ಮದಲ್ಲಿ.
[2] ನಮ್ಮ ಕಣ್ಣಿಗೆ ಕಾಣುವ.]

ಬ್ರಹ್ಮೈವೇದಮಮೃತಂ ಪುರಸ್ತಾ-
ದ್ಬ್ರಹ್ಮ ಪಶ್ಚಾದ್ಬ್ರಹ್ಮ ದಕ್ಷಿಣತಶ್ಚೋತ್ತರೇಣ ।
ಅಧಶ್ಚೋರ್ಧ್ವಂ ಚ ಪ್ರಸೃತಂ
ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್ ॥ ೧೨ ॥

ಪುರಸ್ತಾತ್=ಮುಂದಿರುವ ಇದಂ=ಇದು ಅಮೃತಂ=ಅಮೃತವಾದ ಬ್ರಹ್ಮ ಏವ=ಬ್ರಹ್ಮವೇ ; ಪಶ್ಚಾತ್=ಹಿಂದೆಯೂ ದಕ್ಷಿಣತಃ=ದಕ್ಷಿಣಕ್ಕೂ ಉತ್ತರೇಣ ಚ=ಉತ್ತರಕ್ಕೂ ಬ್ರಹ್ಮ=ಬ್ರಹ್ಮವೇ ; ಅಧಃ=ಕೆಳಗೂ ಊರ್ಧ್ವಂ ಚ=ಮೇಲೆಯೂ ಬ್ರಹ್ಮ=ಬ್ರಹ್ಮವೇ ಪ್ರಸೃತಂ=ಪ್ರಸರಿಸಿರುವುದು. ಇದಂ ವಿಶ್ವಂ=ಈ ಜಗತ್ತೆಲ್ಲವೂ ವರಿಷ್ಠಂ=ಶ್ರೇಷ್ಠತಮವಾದ ಬ್ರಹ್ಮ ಏವ=ಬ್ರಹ್ಮವೇ.

೧೨. ಮುಂದಿರುವ ಇದು[1] ಅಮೃತವಾದ ಬ್ರಹ್ಮವೇ : ಹಿಂದೆಯೂ ದಕ್ಷಿಣಕ್ಕೂ ಉತ್ತರಕ್ಕೂ ಇರುವುದು ಬ್ರಹ್ಮವೇ ; ಕೆಳಗೂ ಮೇಲೂ ಪ್ರಸರಿಸಿರುವುದು[2] ಬ್ರಹ್ಮವೇ. ಈ ಜಗತ್ತೆಲ್ಲವೂ ಶ್ರೇಷ್ಠತಮವಾದ ಬ್ರಹ್ಮವೇ.[3]

[[1] ಅವಿದ್ಯಾದೃಷ್ಟಿಯುಳ್ಳವರಿಗೆ ಅಬ್ರಹ್ಮದಂತೆ ಭಾಸವಾಗುವ.
[2] ನಾಮರೂಪಗಳಿರುವಂತೆ ತೋರುವುದು.
[3] ಹಗ್ಗವು ಹಾವಿನ ಹಾಗೆ ತೋರುವಂತೆ ಸಮಸ್ತ ಅಬ್ರಹ್ಮಪ್ರತ್ಯಯವು ಕೇವಲ ಅವಿದ್ಯೆ. ಬ್ರಹ್ಮವೊಂದೇ ಪರಮಾರ್ಥಸತ್ಯವೆಂಬುದು ವೇದಾನುಶಾಸನ.]

ಮೂರನೆಯ ಮುಂಡಕ

ಮೊದಲನೆಯ ಖಂಡ

ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯ-
ನಶ್ನನ್ನನ್ಯೋ ಅಭಿಚಾಕಶೀತಿ ॥ ೧ ॥

ಸಯುಜಾ [ಸಯುಜೌ]=ಸರ್ವದಾ ಜೊತೆಯಲ್ಲಿರುವ ಸಖಾಯಾ [ಸಖಾಯೌ]= ಸಖಿರಾಗಿರುವ ದ್ವಾ [ದ್ವೌ]=ಎರಡು ಸುಪರ್ಣಾ [ಸುಪರ್ಣೌ]=ಪಕ್ಷಿಗಳು ಸಮಾನಂ ವೃಕ್ಷಂ=ಒಂದೇ ವೃಕ್ಷವನ್ನು ಪರಿಷಸ್ವಜಾತೇ=ಆಲಿಂಗಿಸಿಕೊಂಡಿವೆ; ತಯೋಃ=ಅವೆರಡರಲ್ಲಿ ಅನ್ಯಃ=ಒಂದು ಸ್ವಾದು=ಸವಿಯಾದ ಪಿಪ್ಪಲಂ=ಹಣ್ಣನ್ನು ಅತ್ತಿ=ತಿನ್ನುತ್ತದೆ. ಅನ್ಯಃ=ಇನ್ನೊಂದು ಅನಶ್ನನ್=ತಿನ್ನದೆ ಅಭಿಚಾಕಶೀತಿ=ನೋಡುತ್ತದೆ.

೧. ಸರ್ವದಾ ಜೊತೆಯಲ್ಲಿರುವ ಸಖಿರಾದ[1] ಎರಡು ಪಕ್ಷಿಗಳು[2] ಒಂದೇ ವೃಕ್ಷವನ್ನು[3] ಆಲಿಂಗಿಸಿಕೊಂಡಿವೆ.[4] ಅವೆರಡರಲ್ಲಿ ಒಂದು[5] ಸವಿಯಾದ ಹಣ್ಣನ್ನು[6] ತಿನ್ನುತ್ತದೆ. ಇನ್ನೊಂದು[7] ತಿನ್ನದೆ ನೋಡುತ್ತದೆ.

[ಮೊದಲು ಅಕ್ಷರಪುರುಷನೆಂಬ ಹೆಸರಿನ ಸತ್ಯವನ್ನು ಅರಿತುಕೊಳ್ಳಲು ಸಾಧನವಾದ ಪರವಿದ್ಯೆಯನ್ನು ಉಪದೇಶಿಸಿದ್ದಾಯಿತು. ಈ ಅಕ್ಷರಪುರುಷಜ್ಞಾನದಿಂದ ಸಂಸಾರಕ್ಕೆ ಕಾರಣವಾದ ಹೃದಯಗ್ರಂಥಿಯೇ ಮೊದಲಾದವು ಅತ್ಯಂತವಾಗಿ ನಾಶವಾಗುತ್ತವೆ. ಅನಂತರ ಆ ಅಕ್ಷರಪುರುಷನ ದರ್ಶನಕ್ಕೆ ಸಾಧನವಾದ ಉಪಾಸನಯೋಗವನ್ನು ಧನುಃ ಕಲ್ಪನೆಯ ಮೂಲಕ ಹೇಳಿದ್ದಾಯಿತು. ಈಗ ಅದಕ್ಕೆ ಸಹಕಾರಿಗಳಾದ ಸತ್ಯಾದಿಸಾಧನಗಳನ್ನು ಹೇಳಲು ಮುಂದಿನ ಗ್ರಂಥವು ಆರಂಭವಾಗಿದೆ.

[1 ಸಮಾನವಾದ ಹೆಸರುಳ್ಳ.

2 ಅವಿದ್ಯಾ-ಕಾಮ-ಕರ್ಮವಾಸನೆಗಳಿಗೆ ಆಶ್ರಯವಾಗಿರುವ ಲಿಂಗಶರೀರವೇ ಉಪಾಧಿಯಾಗಿ ಉಳ್ಳ ಕ್ಷೇತ್ರಜ್ಞನಾದ ಜೀವಾತ್ಮ ಮತ್ತು ಈಶ್ವರ.

3 ಶರೀರವೆಂಬ ಕ್ಷೇತ್ರ; ಇದೇ ಅವ್ಯಕ್ತದಿಂದ ಹುಟ್ಟಿ ಸರ್ವಪ್ರಾಣಿಗಳ ಕರ್ಮಫಲಕ್ಕೆ ಆಶ್ರಯವಾಗಿರುವ ಕ್ಷೇತ್ರ. ಈ ವೃಕ್ಷವನ್ನೇ 'ಊರ್ಧ್ವಮೂಲಃ ಅವಾಕ್‌ಶಾಖಃ ಅಶ್ವತ್ಥಃ' ಎಂದು ಕರೆದಿದೆ.

4 ಆಶ್ರಯಿಸಿಕೊಂಡಿವೆ.

[5] ಜೀವಾತ್ಮ.

[6] ತನ್ನ ಕರ್ಮದಿಂದ ಉಂಟಾದ ಸುಖದುಃಖರೂಪವಾದ ಫಲ.

[7] ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಸರ್ವಜ್ಞನಾದ ಸರ್ವಸತ್ತ್ವೋಪಾಧಿಯಾದ ಈಶ್ವರ. ಇವನು ಭೋಜ್ಯಭೋಕ್ತೃಗಳನ್ನು ನಿತ್ಯಸಾಕ್ಷಿತ್ವಸತ್ತಾಮಾತ್ರದಿಂದ ಪ್ರೇರಿಸುತ್ತಾನೆ.]

ಸಮಾನೇ ವೃಕ್ಷೇ ಪುರುಷೋ ನಿಮಗ್ನೋಽ-
ನೀಶಯಾ ಶೋಚತಿ ಮುಹ್ಯಮಾನಃ ।
ಜುಷ್ಟಂ ಯದಾ ಪಶ್ಯತ್ಯನ್ಯಮೀಶ-
ಮಸ್ಯ ಮಹಿಮಾನಮಿತಿ ವೀತಶೋಕಃ ॥ ೨ ॥

ಪುರುಷಃ=ಪುರುಷನು ಸಮಾನೇ ವೃಕ್ಷೇ=ಒಂದೇ ಮರದಲ್ಲಿ ನಿಮಗ್ನಃ=ಮಗ್ನನಾಗಿ ಮುಹ್ಯಮಾನಃ=ಮೋಹಗೊಂಡವನಾಗಿ ಅನೀಶಯಾ=ದೈನ್ಯದಿಂದ ಶೋಚತಿ=ಶೋಕಿಸುತ್ತಾನೆ : ಯದಾ=ಯಾವಾಗ ಜುಷ್ಟಂ=ಸೇವಿಸಲ್ಪಟ್ಟ ಅನ್ಯಂ=ತನಗಿಂತ ವಿಲಕ್ಷಣನಾದ ಈಶಂ=ಈಶನನ್ನು [ಮತ್ತು] ಅಸ್ಯ ಮಹಿಮಾನಂ=ಇವನ ಮಹಿಮೆಯನ್ನು ಇತಿ=ಹೀಗೆ ಪಶ್ಯತಿ=ನೋಡುತ್ತಾನೆಯೋ [ತದಾ=ಆಗ] ವೀತಶೋಕಃ [ಭವತಿ]=ಶೋಕವಿಲ್ಲದವನಾಗುವನು.

೨. ಪುರುಷನು[1] ಆ ಒಂದೇ ವೃಕ್ಷದಲ್ಲಿ ಮಗ್ನನಾಗಿ,[2] ಮೋಹಗೊಂಡು,[3] ದೈನ್ಯದಿಂದ[4] ಶೋಕಿಸುತ್ತಿರುವನು : ಸೇವಿಸಲ್ಪಟ್ಟವನೂ,[5] ತನಗಿಂತ ವಿಲಕ್ಷಣನೂ[6] ಆದ ಈಶನನ್ನು[7] ಮತ್ತು ಇವನ ಮಹಿಮೆಯನ್ನು ಹೀಗೆಂದು[8] ಯಾವಾಗ ನೋಡುತ್ತಾನೆಯೋ ಆಗ ಶೋಕವಿಲ್ಲದವನಾಗುವನು.[9]

[[1] ಭೋಕ್ತೃವಾದ ಜೀವ.

[2] ಅವಿದ್ಯಾ ಕಾಮಕರ್ಮಾದಿಗಳ ಭಾರದಿಂದ ಮುಳುಗಿದವನಾಗಿ, ದೇಹಭಾವವನ್ನು ಹೊಂದಿದವನಾಗಿ.

[3] ಅನೇಕ ಅನರ್ಥಗಳಿಂದ ಚಿಂತೆಯನ್ನು ಹೊಂದಿ.

[4] 'ನಾನು ಯಾವುದಕ್ಕೂ ಸಮರ್ಥನಲ್ಲ, ನನ್ನ ಹೆಂಡತಿ ಮಕ್ಕಳು ಸತ್ತರು ; ನಾನು ಬದುಕಿ ಏನು ಪ್ರಯೋಜನ ?' ಎಂಬ ದೀನಭಾವ.

[5] ಅನೇಕ ಯೋಗಮಾರ್ಗಗಳಿಂದಲೂ ಕರ್ಮಗಳಿಂದಲೂ.

[6] ವೃಕ್ಷವೆಂಬ ಉಪಾಧಿಯುಳ್ಳ ಜೀವನಿಗಿಂತ.

[7] ಹಸಿವು ಬಾಯಾರಿಕೆ ಶೋಕ ಮೋಹ ಜರಾಮೃತ್ಯು ಇವುಗಳನ್ನು ಮೀರಿರುವ ಮತ್ತು ಸರ್ವಜಗತ್ತಿಗೆ ಒಡೆಯನಾದ ಈಶ್ವರನನ್ನು, 'ನಾನು ಇವೆಲ್ಲದರ ಆತ್ಮ,

ಸರ್ವಭೂತಗಳಲ್ಲಿ ಸಮಾನನಾಗಿದ್ದಾನೆ. ಅವಿದ್ಯಾದಿದೋಷರಹಿತನಾದ ಮೋಕ್ಷವನ್ನು ಮಾಯೆಯು ಆತ್ಮನಲ್ಲಿ ಇದೆ.

[8] ಜಗದ್ರೂಪವಾದ ವಿಭೂತಿಯನ್ನು 'ಪರಮೇಶ್ವರನಾದ ನನ್ನದು' ಎಂದು.

[9] ಕೃತಕೃತ್ಯನಾಗಿದ್ದಾನೆ.

ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ
ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ।
ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ
ನಿರಂಜನಃ ಪರಮಂ ಸಾಮ್ಯಮುಪೈತಿ ॥ ೩ ॥

ಯದಾ=ಯಾವಾಗ ಪಶ್ಯಃ=ಸಾಧಕನು ರುಕ್ಮವರ್ಣಂ=ಹಿರಣ್ಯವರ್ಣವಾದ ಕರ್ತಾರಂ=ಕರ್ತೃವಾದ ಈಶಂ=ಈಶನಾದ ಬ್ರಹ್ಮಯೋನಿಂ=ಬ್ರಹ್ಮಯೋನಿಯಾದ ಪುರುಷಂ=ಪುರುಷನನ್ನು ಪಶ್ಯತೇ=ನೋಡುತ್ತಾನೆಯೊ ತದಾ=ಆಗ ವಿದ್ವಾನ್=ವಿದ್ವಾಂಸನು ಪುಣ್ಯಪಾಪೇ=ಪುಣ್ಯಪಾಪಗಳನ್ನು ವಿಧೂಯ=ತೊಲಗಿಸಿ ನಿರಂಜನಃ=ನಿರಂಜನನಾಗಿ ಪರಮಂ=ಪ್ರಕೃಷ್ಟವಾದ ಸಾಮ್ಯಂ=ಸಾಮ್ಯವನ್ನು ಉಪೈತಿ=ಹೊಂದುತ್ತಾನೆ.

೩. ಯಾವಾಗ ಸಾಧಕನು ಹಿರಣ್ಯವರ್ಣದವನೂ[1] ಕರ್ತೃವೂ[2] ಈಶನೂ ಬ್ರಹ್ಮಯೋನಿಯೂ[3] ಆದ ಪುರುಷನನ್ನು ನೋಡುತ್ತಾನೆಯೊ, ಆಗ ಆ ವಿದ್ವಾಂಸನು ಪುಣ್ಯಪಾಪಗಳನ್ನು ತೊಲಗಿಸಿಕೊಂಡು ನಿರಂಜನನಾಗಿ[4] ಪರಮ ಸಾಮ್ಯವನ್ನು[5] ಹೊಂದುತ್ತಾನೆ.

[[1] ಸ್ವಯಂಜ್ಯೋತಿಃಸ್ವಭಾವವುಳ್ಳ.
[2] ಸರ್ವಜಗತ್ತಿನ.
[3] ಅಪರಬ್ರಹ್ಮನ ಕಾರಣನಾದ.
[4] ಕ್ಲೇಶರಹಿತನಾಗಿ.
[5] ದ್ವೈತವಿಷಯಗಳಾದ ಸಾಮ್ಯಗಳಲ್ಲ. ಅದ್ವಯಲಕ್ಷಣವುಳ್ಳ ಪರಮಸಾಮ್ಯ]

ಪ್ರಾಣೋ ಹ್ಯೇಷ ಯಃ ಸರ್ವಭೂತೈರ್ವಿಭಾತಿ
ವಿಜಾನನ್ ವಿದ್ವಾನ್ ಭವತೇ ನಾತಿವಾದೀ ।
ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾ-
ನೇಷ ಬ್ರಹ್ಮವಿದಾಂ ವರಿಷ್ಠಃ ॥ ೪ ॥

ಯಃ ಏಷಃ ಹಿ ಪ್ರಾಣಃ = ಯಾವ ಈ ಪ್ರಾಣನು ಸರ್ವಭೂತೈಃ [ಇತ್ಥಂಭೂತ ಲಕ್ಷಣೇ ತೃತೀಯಾ]=ಸರ್ವಭೂತಗಳಾಗಿ ವಿಭಾತಿ=ಪ್ರಕಾಶಿಸುತ್ತಿರುವವನು ; [ಏನಂ= ಇವನನ್ನು ಹೀಗೆ] ವಿಜಾನನ್ = ತಿಳಿದುಕೊಂಡವನಾದ ವಿದ್ವಾನ್ = ವಿದ್ವಾಂಸನು ಅತಿವಾದೀ=ಅತಿವಾದಿಯು ನ ಭವತೇ [ಭವತಿ]=ಆಗುವುದಿಲ್ಲ ; ಆತ್ಮಕ್ರೀಡಃ= ಆತ್ಮಕ್ರೀಡನಾದ ಆತ್ಮರತಿಃ=ಆತ್ಮರತಿಯಾದ ಕ್ರಿಯಾವಾನ್=ಕ್ರಿಯಾವಂತನಾದ ಏಷಃ =ಈತನು ಬ್ರಹ್ಮವಿದಾಂ=ಬ್ರಹ್ಮವಿದರಲ್ಲಿ ವರಿಷ್ಠಃ=ಅತ್ಯಂತ ಶ್ರೇಷ್ಠನು.

೪. ಈ ಪ್ರಾಣನೇ[1] ಸರ್ವಭೂತಗಳಾಗಿ[2] ಪ್ರಕಾಶಿಸುತ್ತಿರುವವನು. (ಇವನನ್ನು ಹೀಗೆ) ಅರಿತುಕೊಂಡ[3] ವಿದ್ವಾಂಸನು ಅತಿವಾದಿಯಾಗುವುದಿಲ್ಲ[4]. ಆತ್ಮಕ್ರೀಡನೂ[5] ಆತ್ಮರತಿಯೂ[6] ಕ್ರಿಯಾವಂತನೂ[7] ಆದ ಈತನು ಬ್ರಹ್ಮವಿದರಲ್ಲಿ ಅತ್ಯಂತ ಶ್ರೇಷ್ಠನಾಗಿರುವನು.

[[1] ಪ್ರಾಣಗಳಿಗೆ ಪ್ರಾಣನಾದ ಪರಮೇಶ್ವರನು.
[2] ಬ್ರಹ್ಮನಿಂದ ಹಿಡಿದು ಸ್ತಂಬದ ವರೆಗೆ.
[3] 'ಅಹಮಸ್ಮಿ' ಎಂದು.
[4] ಎಲ್ಲವನ್ನೂ ಮೀರಿ ನುಡಿಯುವವನು ಅತಿವಾದಿ. ಆತ್ಮನೇ ಪ್ರಾಣದ ಪ್ರಾಣವೆಂದು ಸಾಕ್ಷಾತ್ತಾಗಿ ತಿಳಿದುಕೊಂಡವನು ಅತಿವಾದಿಯಾಗುವುದಿಲ್ಲ.
[5] ಪುತ್ರಪತ್ನಿಯರಲ್ಲಿ ಕ್ರೀಡಿಸದೆ ಆತ್ಮನಲ್ಲಿಯೇ ಕ್ರೀಡಿಸುವವನು.
[6] ಆತ್ಮನಲ್ಲಿಯೇ ಪ್ರೀತಿಯುಳ್ಳವನು.
[7] ಜ್ಞಾನ ಧ್ಯಾನ ವೈರಾಗ್ಯ ಮೊದಲಾದ ಕ್ರಿಯೆಯುಳ್ಳವನು.

ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ
ಸಮ್ಯಗ್ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್ ।
ಅಂತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ
ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ ॥ ೫ ॥

ಏಷಃ ಆತ್ಮಾ=ಈ ಆತ್ಮನು ನಿತ್ಯಂ=ನಿತ್ಯವೂ ಸತ್ಯೇನ=ಸತ್ಯದಿಂದಲೂ ತಪಸಾ= ತಪಸ್ಸಿನಿಂದಲೂ ಸಮ್ಯಗ್ಜ್ಞಾನೇನ=ಸಮ್ಯಗ್ಜ್ಞಾನದಿಂದಲೂ ಬ್ರಹ್ಮಚರ್ಯೇಣ= ಬ್ರಹ್ಮಚರ್ಯದಿಂದಲೂ ಲಭ್ಯ = ಲಭ್ಯನು. [ಏಷಃ = ಇವನು] ಅಂತಃಶರೀರೇ= ಹೃದಯಾಕಾಶದಲ್ಲಿ ಜ್ಯೋತಿರ್ಮಯಃ ಹಿ=ಜ್ಯೋತಿರ್ಮಯನು ಶುಭ್ರಃ=ಶುದ್ಧನು. ಯಂ [ಆತ್ಮಾನಂ]=ಯಾವ ಈ ಆತ್ಮನನ್ನು ಕ್ಷೀಣದೋಷಾಃ=ದೋಷರಹಿತರಾದ ಯತಯಃ=ಯತಿಗಳು ಪಶ್ಯಂತಿ=ನೋಡುತ್ತಾರೆ.

೫. ಈ ಆತ್ಮನು ನಿತ್ಯವೂ ಸತ್ಯದಿಂದಲೂ, (ನಿತ್ಯವೂ) ತಪಸ್ಸಿನಿಂದಲೂ,[1] (ನಿತ್ಯವೂ) ಸಮ್ಯಗ್ಜ್ಞಾನದಿಂದಲೂ,[2] (ನಿತ್ಯವೂ) ಬ್ರಹ್ಮಚರ್ಯದಿಂದಲೂ ಲಭ್ಯನು. (ಇವನು) ಹೃದಯಾಕಾಶದಲ್ಲಿ ಜ್ಯೋತಿರ್ಮಯನೂ ಶುಭ್ರನೂ ಆಗಿ (ಇರುವನು). (ಈ ಆತ್ಮನನ್ನು) ದೋಷರಹಿತರಾದ[3] ಯತಿಗಳು ನೋಡುತ್ತಾರೆ.

[ಈಗ ಜ್ಞಾನಕ್ಕೆ ಸಹಕಾರಿಗಳಾದ ಸತ್ಯಾದಿ ನಿವೃತ್ತಿಪ್ರಧಾನವಾದ ಸಾಧನಗಳು ಭಿಕ್ಷುಗಳಿಗೆ ವಿಧಿಸಲ್ಪಟ್ಟಿವೆ.

[1] ಇಂದ್ರಿಯಗಳ ಮತ್ತು ಮನಸ್ಸಿನ ಏಕಾಗ್ರತೆಯಿಂದ.

[2] ಆತ್ಮನನ್ನು ಯಥಾವತ್ತಾಗಿ ನೋಡುವುದರಿಂದ.

[3] ಕ್ರೋಧಾದಿಚಿತ್ತಮಲಗಳನ್ನು ತೊಲಗಿಸಿಕೊಂಡಿರುವ.]

ಸತ್ಯಮೇವ ಜಯತೇ ನಾನೃತಂ
ಸತ್ಯೇನ ಪಂಥಾ ವಿತತೋ ದೇವಯಾನಃ ।
ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ
ಯತ್ರ ತತ್ ಸತ್ಯಸ್ಯ ಪರಮಂ ನಿಧಾನಮ್ ॥ ೬ ॥

ಸತ್ಯಂ ಏವ=ಸತ್ಯವೇ ಜಯತೇ=ಜಯಿಸುತ್ತದೆ. ಅನೃತಂ ನ=ಅನೃತವಲ್ಲ. ಯತ್ರ=ಎಲ್ಲಿ ಸತ್ಯಸ್ಯ=ಸತ್ಯದ ತತ್=ಆ ಪರಮಂ ನಿಧಾನಂ=ಪರಮನಿಧಾನವು [ಇರುವುದೊ ಅಲ್ಲಿಗೆ] ಆಪ್ತಕಾಮಾಃ ಋಷಯಃ=ಆಪ್ತಕಾಮರಾದ ಋಷಿಗಳು ಯೇನ ಹಿ=ಯಾವ ಪಥದಿಂದ ಆಕ್ರಮಂತಿ=ಹೋಗುತ್ತಾರೆಯೊ [ಸಃ ದೇವಯಾನಃ =ಅಂತಹ ದೇವಯಾನವೆಂಬ] ಪಂಥಾಃ=ಪಥವು ಸತ್ಯೇನ=ಸತ್ಯದಿಂದ ವಿತತಃ=ಹರಡಿ ರುತ್ತದೆ.

೬. ಸತ್ಯವೆ[1] ಜಯಿಸುತ್ತದೆ. ಅನೃತವಲ್ಲ.[2] ಸತ್ಯದ ಆ ಪರಮ ನಿಧಾನವು[3] ಇರುವಲ್ಲಿಗೆ ಆಪ್ತಕಾಮರಾದ[4] ಋಷಿಗಳು ಯಾವ ಪಥದಿಂದ ಹೋಗುತ್ತಾರೆಯೊ ಅಂತಹ ದೇವಯಾನವೆಂಬ ಪಥವು ಸತ್ಯದಿಂದ ಹರಡಿರು ತ್ತದೆ.[5]

[[1] ಸತ್ಯವಂತನು.

[2] ಅನೃತವಾದಿಯಲ್ಲ.

[3] ಪುರುಷಾರ್ಥರೂಪದಿಂದ ಇಡಲ್ಪಟ್ಟಿರುವುದರಿಂದ.

[4] ವಿಗತತೃಷ್ಣರಾದ.
[5] ಸತತವಾಗಿ ಪ್ರವೃತ್ತವಾಗುತ್ತದೆ.]

ಬೃಹಚ್ಚ ತದ್ದಿವ್ಯಮಚಿಂತ್ಯರೂಪಂ
ಸೂಕ್ಷ್ಮಾಚ್ಚ ತತ್ ಸೂಕ್ಷ್ಮತರಂ ವಿಭಾತಿ ।
ದೂರಾತ್ ಸುದೂರೇ ತದಿಹಾಂತಿಕೇ ಚ
ಪಶ್ಯತ್ಸ್ವಿಹೈವ ನಿಹಿತಂ ಗುಹಾಯಾಮ್ ॥ ೭ ॥

ತತ್=ಅದು ಬೃಹತ್ ಚ=ಬೃಹತ್ತಾದುದು ದಿವ್ಯಂ=ದಿವ್ಯವಾದುದು ಅಚಿಂತ್ಯರೂಪಂ=ಅಚಿಂತ್ಯ ರೂಪವುಳ್ಳದ್ದು ; ಚ=ಮತ್ತು ತತ್=ಅದು ಸೂಕ್ಷ್ಮಾತ್=ಸೂಕ್ಷ್ಮವಾದುದಕ್ಕಿಂತಲೂ ಸೂಕ್ಷ್ಮತರಂ = ಸೂಕ್ಷ್ಮತರವಾಗಿ ವಿಭಾತಿ = ಪ್ರಕಾಶಿಸುತ್ತಿರುವುದು ; ತತ್ = ಅದು ದೂರಾತ್ = ದೂರವಾದುದಕ್ಕಿಂತಲೂ ಸುದೂರೇ=ಅತ್ಯಂತ ದೂರದಲ್ಲಿಯೂ, ಇಹ ಅಂತಿಕೇ=ಇಲ್ಲಿಯೇ ಸಮೀಪದಲ್ಲಿಯೂ [ವರ್ತತೇ=ಇರುವುದು] ; ಇಹ=ಇಲ್ಲಿ ಪಶ್ಯತ್ಸು=ನೋಡುವವರಿಗೆ ಗುಹಾಯಾಂ ಏವ=ಗುಹೆಯಲ್ಲಿಯೇ ನಿಹಿತಂ=ಇಡಲ್ಪಟ್ಟಿರುವುದು.

೭. ಅದು[1] ಬೃಹತ್ತಾಗಿಯೂ[2] ದಿವ್ಯವಾಗಿಯೂ[3] ಅಚಿಂತ್ಯರೂಪವುಳ್ಳದ್ದಾಗಿಯೂ ಇದೆ : ಅದು ಸೂಕ್ಷ್ಮವಾದುದಕ್ಕಿಂತಲೂ ಸೂಕ್ಷ್ಮತರವಾಗಿ ಪ್ರಕಾಶಿಸುತ್ತಿರುವುದು.[4] ಅದು ದೂರವಾಗಿರುವುದಕ್ಕಿಂತಲೂ ಅತ್ಯಂತ ದೂರದಲ್ಲಿಯೂ,[5] ಇಲ್ಲಿಯೇ[6] ಸಮೀಪದಲ್ಲಿಯೂ[7] (ಇರುವುದು.) (ಅದು) ಇಲ್ಲಿ ನೋಡುವವರಿಗೆ[8] ಗುಹೆಯಲ್ಲಿಯೇ[9] ಇಡಲ್ಪಟ್ಟಿರುವುದು.

[[1] ಸತ್ಯಾದಿ ಸಾಧನಗಳಿಂದ ಪ್ರಾಪ್ತವಾಗುವ ಬ್ರಹ್ಮ.
[2] ಸರ್ವತಃ ವ್ಯಾಪಿಸಿಕೊಂಡಿರುವುದರಿಂದ.
[3] ಸ್ವಯಂಪ್ರಕಾಶವಾಗಿ, ಇಂದ್ರಿಯಗಳಿಗೆ ಗೋಚರವಾಗದೆ.
[4] ಸೂರ್ಯಚಂದ್ರರೇ ಮೊದಲಾದ ಆಕಾರಗಳಿಂದ.
[5] ಅಜ್ಞಾನಿಗಳಿಗೆ.
[6] ದೇಹದಲ್ಲಿಯೇ.
[7] ಜ್ಞಾನಿಗಳಿಗೆ.
[8] ಚೇತನವಂತರಿಗೆ.
[9] ಬುದ್ಧಿಯಲ್ಲಿ.]

ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ
ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ ।
ಜ್ಞಾನಪ್ರಸಾದೇನ ವಿಶುದ್ಧಸತ್ತ್ವ-
ಸ್ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ ॥ ೮ ॥

[ಸಃ = ಅವನು] ಚಕ್ಷುಷಾ = ಕಣ್ಣಿನಿಂದ ನ ಗೃಹ್ಯತೇ = ಗ್ರಹಿಸಲ್ಪಡುವುದಿಲ್ಲ. ವಾಚಾ ಅಪಿ=ಮಾತಿನಿಂದಲೂ ನ=ಗ್ರಹಿಸಲ್ಪಡುವುದಿಲ್ಲ; ಅನ್ಯೈಃದೇವೈಃ=ಇತರ ಇಂದ್ರಿಯಗಳಿಂದಲೂ, ತಪಸಾ=ತಪಸ್ಸಿನಿಂದಲೂ ಕರ್ಮಣಾ ವಾ=ಅಥವಾ ಕರ್ಮದಿಂದಲೂ ನ=ಗ್ರಹಿಸಲ್ಪಡುವುದಿಲ್ಲ. ತು=ಆದರೆ ಜ್ಞಾನಪ್ರಸಾದೇನ=ಜ್ಞಾನಪ್ರಸಾದದಿಂದ ವಿಶುದ್ಧಸತ್ತ್ವಃ = ಶುದ್ಧವಾದ ಅಂತಃಕರಣವುಳ್ಳವನಾಗಿ ಧ್ಯಾಯಮಾನಃ ಧ್ಯಾನಮಾಡುವವನು ತತಃ=ಅದರಿಂದ ನಿಷ್ಕಲಂ=ನಿಷ್ಕಲನಾದ ತಂ=ಆ ಆತ್ಮನನ್ನು ಪಶ್ಯತೇ=ನೋಡುತ್ತಾನೆ.

೮. ಆವನನ್ನು ಕಣ್ಣಿನಿಂದಾಗಲಿ[1] ಮಾತಿನಿಂದಾಗಲಿ[2] ಇತರ ಇಂದ್ರಿಯಗಳಿಂದಾಗಲಿ ಗ್ರಹಿಸಲು ಆಗುವುದಿಲ್ಲ; ತಪಸ್ಸಿನಿಂದಾಗಲಿ ಅಥವಾ ಕರ್ಮದಿಂದಾಗಲಿ[3] (ಗ್ರಹಿಸಲಾಗುವುದಿಲ್ಲ). ಆದರೆ ಜ್ಞಾನಪ್ರಸಾದದಿಂದ[4] ಶುದ್ಧವಾದ ಅಂತಃಕರಣವುಳ್ಳವನಾಗಿ ಧ್ಯಾನಮಾಡುವವನು[5] ಅದರಿಂದ ನಿಷ್ಕಲನಾದ ಆ ಆತ್ಮನನ್ನು ನೋಡುತ್ತಾನೆ.

[1 ರೂಪವಿಲ್ಲದಿರುವುದರಿಂದ.

2 ವಾಚ್ಯನಲ್ಲದುದರಿಂದ.

3 ಅಗ್ನಿಹೋತ್ರಾದಿ ಕರ್ಮದಿಂದ.

4 ಸರ್ವಪ್ರಾಣಿಗಳ ಜ್ಞಾನವು ಸ್ವಭಾವದಿಂದ ಆತ್ಮನನ್ನು ತಿಳಿಸುವುದಕ್ಕೆ ಸಮರ್ಥವಾಗಿದ್ದರೂ ಬಾಹ್ಯವಾದ ವಿಷಯಾಸಕ್ತಿಯೇ ಮೊದಲಾದ ದೋಷಗಳಿಂದ ಕಲುಷಿತವಾಗಿ ನಿತ್ಯವೂ ಸಂನಿಹಿತವಾದ ಆತ್ಮತತ್ತ್ವವನ್ನು ತಿಳಿಸಲು ಅಶಕ್ತವಾಗಿದೆ. ಯಾವಾಗ ಇಂದ್ರಿಯಗಳ ಮತ್ತು ವಿಷಯಗಳ ಸಂಸರ್ಗದಿಂದ ಉಂಟಾಗುವ ರಾಗಾದಿ ದೋಷಗಳು ನಾಶವಾಗಿ ಅದು ಸ್ವಚ್ಛವೂ ಶಾಂತವೂ ಆಗುವುದೋ ಆಗ ಜ್ಞಾನದ ಪ್ರಸಾದ ಉಂಟಾಗುವುದು.

5 ಸತ್ಯಾದಿಸಾಧನಗಳಿಂದ ಕೂಡಿದವನಾಗಿ ಇಂದ್ರಿಯಗಳನ್ನು ಒಳಕ್ಕೆ ಸೆಳೆದುಕೊಂಡು ಏಕಾಗ್ರವಾದ ಮನಸ್ಸಿನಿಂದ ಧ್ಯಾನಮಾಡುವವನು.]

ಏಷೋಽಣುರಾತ್ಮಾ ಚೇತಸಾ ವೇದಿತವ್ಯೋ
ಯಸ್ಮಿನ್ ಪ್ರಾಣಃ ಪಂಚಧಾ ಸಂವಿವೇಶ ।
ಪ್ರಾಣೈಶ್ಚಿತ್ತಂ ಸರ್ವಮೋತಂ ಪ್ರಜಾನಾಂ
ಯಸ್ಮಿನ್ ವಿಶುದ್ಧೇ ವಿಭವತ್ಯೇಷ ಆತ್ಮಾ ॥ ೯ ॥

ಯಸ್ಮಿನ್=ಯಾವುದರಲ್ಲಿ ಪ್ರಾಣಃ=ಪ್ರಾಣವು ಪಂಚಧಾ=ಪಂಚಪ್ರಕಾರವಾಗಿ ಸಂವಿವೇಶ=ಪ್ರವೇಶಿಸಿರುವುದೊ [ತಸ್ಮಿನ್ ಏವ=ಅಲ್ಲಿಯೇ] ಏಷಃ=ಈ ಅಣುಃ = ಅಣುವಾದ ಆತ್ಮಾ=ಆತ್ಮನು ಚೇತಸಾ=ಚೇತಸ್ಸಿನಿಂದ ವೇದಿತವ್ಯಃ=ತಿಳಿಯಲ್ಪಡತಕ್ಕವನು. ಪ್ರಜಾನಾಂ=ಜನರ ಸರ್ವಂಚಿತ್ತಂ=ಚಿತ್ತವೆಲ್ಲವೂ ಪ್ರಾಣೈಃ [ಸಹ]=ಪ್ರಾಣಗಳೊಡನೆ ಓತಂ=ವ್ಯಾಪ್ತವಾಗಿದೆ ; ಯಸ್ಮಿನ್ [ಚಿತ್ತೇ] ವಿಶುದ್ಧೇ=ಯಾವ ಆ ಚಿತ್ತವು ಶುದ್ಧವಾದರೆ ಏಷಃ=ಈ ಆತ್ಮಾ=ಆತ್ಮನು ವಿಭವತಿ=ಪ್ರಕಾಶಿಸುತ್ತಾನೆ.

೯. ಯಾವುದರಲ್ಲಿ[1] ಪ್ರಾಣವು ಪಂಚಪ್ರಕಾರವಾಗಿ[2] ಪ್ರವೇಶಿಸಿರುವುದೊ (ಅಲ್ಲಿಯೇ) ಈ ಅಣುವಾದ ಆತ್ಮನನ್ನು ಚೇತಸ್ಸಿನಿಂದ ತಿಳಿಯಬೇಕು. ಜನರ ಚಿತ್ತವೆಲ್ಲವೂ ಪ್ರಾಣಗಳೊಡನೆ ವ್ಯಾಪ್ತವಾಗಿದೆ ; ಆ ಚಿತ್ತವು ಶುದ್ಧವಾದರೆ[3] ಆತ್ಮನು ಪ್ರಕಾಶಿಸುತ್ತಾನೆ.

[[1] ಶರೀರದಲ್ಲಿ ಎಂದರೆ ಹೃದಯದಲ್ಲಿ.
[2] ಪ್ರಾಣಾಪಾನಾದಿ ಭೇದದಿಂದ.
[3] ಕ್ಲೇಶಾದಿಕಲ್ಮಷಗಳು ನಾಶವಾದರೆ.]

ಯಂ ಯಂ ಲೋಕಂ ಮನಸಾ ಸಂವಿಭಾತಿ
ವಿಶುದ್ಧಸತ್ತ್ವಃ ಕಾಮಯತೇ ಯಾಂಶ್ಚ ಕಾಮಾನ್ ।
ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾಂ-
ಸ್ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ಭೂತಿಕಾಮಃ ॥ ೧೦ ॥

ವಿಶುದ್ಧಸತ್ತ್ವಃ=ವಿಶುದ್ಧಸತ್ತ್ವನು ಯಂ ಯಂ=ಯಾವ ಯಾವ ಲೋಕಂ=ಲೋಕವನ್ನು ಮನಸಾ=ಮನಸ್ಸಿನಿಂದ ಸಂವಿಭಾತಿ=ಸಂಕಲ್ಪಿಸುತ್ತಾನೆಯೊ ಚ=ಮತ್ತು ಯಾನ್ ಕಾಮಾನ್=ಯಾವ ಕಾಮಗಳನ್ನು ಕಾಮಯತೇ=ಬಯಸುತ್ತಾನೆಯೊ, ತಂ ತಂ=ಆ ಆ ಲೋಕಂ=ಲೋಕವನ್ನು ಚ=ಮತ್ತು ತಾನ್ ಕಾಮಾನ್=ಆ ಕಾಮಗಳನ್ನು ಜಯತೇ=ಹೊಂದುತ್ತಾನೆ. ತಸ್ಮಾತ್=ಆದುದರಿಂದ ಭೂತಿಕಾಮಃ=ವಿಭೂತಿಯನ್ನು ಬಯಸುವವನು ಆತ್ಮಜ್ಞಂ ಹಿ=ಆತ್ಮಜ್ಞನನ್ನು ಅರ್ಚಯೇತ್=ಪೂಜಿಸಬೇಕು.

೧೦. ವಿಶುದ್ಧಸತ್ತ್ವನು[1] ಯಾವ ಯಾವ ಲೋಕವನ್ನು[2] ಮನಸ್ಸಿನಿಂದ ಸಂಕಲ್ಪಿಸುವನೊ[3] ಮತ್ತು ಯಾವ ಕಾಮಗಳನ್ನು ಬಯಸುವನೊ ಆಯಾ ಲೋಕವನ್ನೂ ಆ ಕಾಮಗಳನ್ನೂ ಪೊಂದುತ್ತಾನೆ. ಆದುದರಿಂದ[4] ವಿಭೂತಿಯನ್ನು ಬಯಸುವವನು ಆತ್ಮಜ್ಞನನ್ನು[5] ಪೂಜಿಸಬೇಕು.[6]

[illegible] ಸರ್ವಾತ್ಮನಾಗುವನು : ಅವನಿಂದಲೇ ಸರ್ವಲೋಕಗಳೂ [illegible] ಉಂಟಾಗುತ್ತದೆ.

1 ಕ್ಷೇತ್ರಜ್ಞನಾದ ಆತ್ಮಜ್ಞಾನಿಯು.

2 ಪಿತೃಲೋಕವೇ ಮೊದಲಾದ.

3 ತನಗೆ ಅಥವಾ ಇತರರಿಗೆ.

4 ಜ್ಞಾನಿಯು ಸತ್ಯಸಂಕಲ್ಪನಾಗಿರುವುದರಿಂದ

5 ಆತ್ಮಜ್ಞಾನದಿಂದ ಶುದ್ಧವಾದ ಅಂತಃಕರಣವುಳ್ಳವನನ್ನು.

6 ಪಾದಪ್ರಕ್ಷಾಳನ-ಶುಶ್ರೂಷಾ-ನಮಸ್ಕಾರಗಳಿಂದ.]

ಎರಡನೆಯ ಖಂಡ

ಸ ವೇದೈತತ್ ಪರಮಂ ಬ್ರಹ್ಮ ಧಾಮ
ಯತ್ರ ವಿಶ್ವಂ ನಿಹಿತಂ ಭಾತಿ ಶುಭ್ರಮ್ ।
ಉಪಾಸತೇ ಪುರುಷಂ ಯೇ ಹ್ಯಕಾಮಾ-
ಸ್ತೇ ಶುಕ್ರಮೇತದತಿವರ್ತಂತಿ ಧೀರಾಃ ॥ ೧ ॥

ಯತ್ರ=ಯಾವುದರಲ್ಲಿ ವಿಶ್ವಂ=ಸಮಸ್ತ ಜಗತ್ತು ನಿಹಿತಂ=ಸಮರ್ಪಿತವಾಗಿದೆಯೊ. [ಯತ್ ಚ=ಯಾವುದು] ಶುಭ್ರಂ ಭಾತಿ=ಶುದ್ಧವಾಗಿ ಪ್ರಕಾಶಿಸುತ್ತಿರುವುದೊ ಏತತ್= ಈ ಪರಮಂ=ಪರಮವಾದ ಬ್ರಹ್ಮ ಧಾಮ=ಬ್ರಹ್ಮವೆಂಬ ಸ್ಥಾನವನ್ನು ಸಃ=ಅವನು ವೇದ=ತಿಳಿದಿರುವನು. ಯೇ ಅಕಾಮಾಃ=ನಿಷ್ಕಾಮರಾದ ಯಾರು ಪುರುಷಂ=ಆತ್ಮಜ್ಞ ನನ್ನು ಉಪಾಸತೇ=ಉಪಾಸಿಸುವರೊ ತೇ ಧೀರಾಃ=ಆ ಧೀರರು ಏತತ್ ಶುಕ್ರಂ=ಈ ಶುಕ್ರವನ್ನು ಅತಿವರ್ತಂತಿ=ಅತಿಕ್ರಮಿಸುತ್ತಾರೆ.

೧. ಯಾವುದರಲ್ಲಿ[1] ಸಮಸ್ತ ಜಗತ್ತೂ ಸಮರ್ಪಿತವಾಗಿದೆಯೊ, (ಯಾವುದು) ಶುದ್ಧವಾಗಿ ಪ್ರಕಾಶಿಸುತ್ತಿರುವುದೊ ಈ ಪರಮವಾದ ಬ್ರಹ್ಮ ವೆಂಬ ಸ್ಥಾನವನ್ನು ಅವನು ತಿಳಿದಿರುವನು. ನಿಷ್ಕಾಮರಾದ[2] ಯಾರು ಈ ಆತ್ಮಜ್ಞನನ್ನು ಉಪಾಸಿಸುವರೊ ಆ ಧೀರರು ಈ ಶುಕ್ರವನ್ನು[3] ಅತಿಕ್ರಮಿಸು ತ್ತಾರೆ.

[ಏಕೆ ಆತ್ಮಜ್ಞನು ಪೂಜಾರ್ಹನು ?
[1] ಬ್ರಹ್ಮವೆಂಬ ಸ್ಥಾನದಲ್ಲಿ.
[2] ವಿಭೂತಿಯ ತೃಷ್ಣೆಯನ್ನು ಕೂಡ ಬಿಟ್ಟಿರುವ.
[3] ಶರೀರಗ್ರಹಣದ ಕಾರಣವನ್ನು.]

ಕಾಮಾನ್ ಯಃ ಕಾಮಯತೇ ಮನ್ಯಮಾನಃ
ಸ ಕಾಮಭಿರ್ಜಾಯತೇ ತತ್ರ ತತ್ರ ।
ಪರ್ಯಾಪ್ತಕಾಮಸ್ಯ ಕೃತಾತ್ಮನಸ್ತು
ಇಹೈವ ಸರ್ವೇ ಪ್ರವಿಲೀಯಂತಿ ಕಾಮಾಃ ॥ ೨ ॥

ಯಃ=ಯಾವನು ಕಾಮಾನ್=ಕಾಮಗಳನ್ನು ಮನ್ಯಮಾನಃ=ಯೋಚಿಸುತ್ತ ಕಾಮ ಯತೇ=ಕಾಮಿಸುವನೊ ಸಃ=ಅವನು ಕಾಮಭಿಃ [ಕಾಮ್ಯೈಃ]=ಕಾಮಗಳೊಂದಿಗೆ ತತ್ರ

ತತ್ರ=ಅಲ್ಲಲ್ಲಿ ಜಾಯತೇ=ಹುಟ್ಟುತ್ತಾನೆ. ಪರ್ಯಾಪ್ತಕಾಮಸ್ಯ=ಪೂರ್ಣಕಾಮನಾದ ಕೃತಾತ್ಮನಃ=ಕೃತಾತ್ಮನಿಗೆ ಸರ್ವೇ ಕಾಮಾಃ=ಎಲ್ಲ ಕಾಮಗಳು ಇಹ ಏವ=ಇಲ್ಲಿಯೇ ಪ್ರವಿಲೀಯಂತೇ=ನಾಶವಾಗುವುವು.

೨. ಯಾವನು ಕಾಮಗಳನ್ನು[1] ಯೋಚಿಸುತ್ತ ಕಾಮಿಸುವನೊ ಅವನು ಕಾಮಗಳೊಂದಿಗೆ[2] ಅಲ್ಲಲ್ಲಿ ಹುಟ್ಟುತ್ತಾನೆ. ಪೂರ್ಣಕಾಮನಾದ ಕೃತಾತ್ಮನಿಗೆ ಎಲ್ಲ ಕಾಮಗಳು ಇಲ್ಲಿಯೇ ನಾಶವಾಗುವುವು.

[ಮುಮುಕ್ಷುವಿಗೆ ಕಾಮತ್ಯಾಗವೇ ಪ್ರಧಾನಸಾಧನವು ಎಂಬುದನ್ನು ಇಲ್ಲಿ ಹೇಳಿದೆ.

[1] ದೃಷ್ಟಾದೃಷ್ಟ ವಿಷಯಗಳನ್ನು.

[2] ಧರ್ಮಾಧರ್ಮಗಳಲ್ಲಿ ಪ್ರವರ್ತಿಸಲು ಕಾರಣವಾದ ಮತ್ತು ವಿಷಯೋಚ್ಚಾರೂಪವಾದ ಕಾಮಗಳೊಡನೆ.]

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯ-
ಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥ ೩ ॥

ಅಯಂ ಆತ್ಮಾ=ಈ ಆತ್ಮನು ಪ್ರವಚನೇನ=ಪ್ರವಚನದಿಂದ ನ ಲಭ್ಯಃ=ಲಭ್ಯನಲ್ಲ ; ಮೇಧಯಾ=ಗ್ರಂಥಧಾರಣ ಶಕ್ತಿಯಿಂದಲೂ ನ=ಲಭ್ಯನಲ್ಲ ; ಬಹುನಾ ಶ್ರುತೇನ=ಬಹು ಶ್ರವಣದಿಂದ ನ=ಲಭ್ಯನಲ್ಲ ; ಏಷಃ=ಈ ಸಾಧಕನು ಯಂ ಏವ=ಯಾವ ಪರಮಾತ್ಮನನ್ನೇ ವೃಣುತೇ=ಪಡೆಯಲು ಇಚ್ಛಿಸುತ್ತಾನೆಯೊ ತೇನ=ಆ ಇಚ್ಛೆಯಿಂದ ಲಭ್ಯಃ= ಲಭ್ಯನು ; ಅವನಿಗೆ ಏಷಃ ಆತ್ಮಾ=ಈ ಆತ್ಮನು ಸ್ವಾಂ=ತನ್ನ ತನೂಂ=ಶರೀರವನ್ನು ವಿವೃಣುತೇ=ಪ್ರಕಾಶಪಡಿಸುತ್ತಾನೆ.

೩. ಈ ಆತ್ಮನು ಪ್ರವಚನದಿಂದ[1] ಲಭ್ಯನಲ್ಲ ; ಗ್ರಂಥಧಾರಣಶಕ್ತಿಯಿಂದಲೂ ಬಹುಶ್ರವಣದಿಂದಲೂ ಲಭ್ಯನಲ್ಲ ; ಯಾವ ಪರಮಾತ್ಮನನ್ನೇ ಈ ಸಾಧಕನು ಪಡೆಯಲು ಇಚ್ಛಿಸುತ್ತಾನೆಯೊ ಆ ಇಚ್ಛೆಯಿಂದಲೇ (ಅವನು) ಲಭ್ಯನು ; ಅವನಿಗೆ ಈ ಆತ್ಮನು ತನ್ನ ಶರೀರವನ್ನು[2] ಪ್ರಕಾಶಪಡಿಸುತ್ತಾನೆ.

[ಇತರ ಸಾಧನಗಳನ್ನೆಲ್ಲ ತ್ಯಾಗಮಾಡಿ ಪರಮಾರ್ಥಪ್ರಾರ್ಥನೆಯೇ ಆತ್ಮಲಾಭಕ್ಕೆ ಸಾಧನ ಎಂದು ಇಲ್ಲಿ ಹೇಳಿದೆ.

[1] ವೇದಶಾಸ್ತ್ರಾಧ್ಯಯನದ ಬಾಹುಳ್ಯದಿಂದ.

[2] ಅವಿದ್ಯೆಯಿಂದ ಆಚ್ಛಾದಿತವಾದ ತನ್ನ ತತ್ತ್ವವನ್ನು ಎಂದರೆ ಸ್ವರೂಪವನ್ನು.]

ನಾಯಮಾತ್ಮಾ ಬಲಹೀನೇನ ಲಭ್ಯೋ
ನ ಚ ಪ್ರಮಾದಾತ್ತಪಸೋ ವಾಪ್ಯಲಿಂಗಾತ್ ।
ಏತೈರುಪಾಯೈರ್ಯತತೇ ಯಸ್ತು ವಿದ್ವಾಂ-
ಸ್ತಸ್ಯೈಷ ಆತ್ಮಾ ವಿಶತೇ ಬ್ರಹ್ಮ ಧಾಮ ॥ ೪ ॥

ಅಯಂ ಆತ್ಮಾ=ಈ ಆತ್ಮನು ಬಲಹೀನೇನ=ಬಲಹೀನನಿಂದ ನ ಲಭ್ಯಃ=ಲಭ್ಯನಲ್ಲ : ಪ್ರಮಾದಾತ್=ಪ್ರಮಾದದಿಂದ ವಾ=ಅಥವಾ ಅಲಿಂಗಾತ್=ಸಂನ್ಯಾಸರಹಿತವಾದ ತಪಸಃ ಅಪಿ ಚ=ಜ್ಞಾನದಿಂದಾಗಲಿ ನ=ಲಭ್ಯನಲ್ಲ ; ತು=ಆದರೆ ಏತೈಃ ಉಪಾಯೈಃ= ಈ ಸಾಧನಗಳಿಂದ ಯಃ ವಿದ್ವಾನ್=ಯಾವ ವಿದ್ವಾಂಸನು ಯತತೇ=ಪ್ರಯತ್ನಿಸು ತ್ತಾನೆಯೊ ತಸ್ಯ=ಅವನ ಏಷಃ ಆತ್ಮಾ=ಈ ಆತ್ಮವು ಬ್ರಹ್ಮ ಧಾಮ=ಬ್ರಹ್ಮಧಾಮವನ್ನು ವಿಶತೇ=ಪ್ರವೇಶಿಸುತ್ತದೆ.

೪. ಈ ಆತ್ಮನು ಬಲಹೀನನಿಗೆ[1] ಲಭ್ಯನಲ್ಲ : ಪ್ರಮಾದದಿಂದಾಗಲಿ ಸಂನ್ಯಾಸವಿಲ್ಲದ ತಪಸ್ಸಿನಿಂದಾಗಲಿ ಲಭ್ಯನಲ್ಲ ; ಆದರೆ ಈ ಸಾಧನೆಗಳಿಂದ[2] ಯಾವ ವಿದ್ವಾಂಸನು ಪ್ರಯತ್ನಿಸುವನೊ ಅವನ ಈ ಆತ್ಮವು ಬ್ರಹ್ಮಧಾಮ ವನ್ನು ಪ್ರವೇಶಿಸುವುದು.

[[1] ಆತ್ಮನಿಷ್ಠಾಜನಿತವಾದ ವೀರ್ಯವಿಲ್ಲದವನಿಗೆ.
[2] ಬಲ ಅಪ್ರಮಾದ ಸಂನ್ಯಾಸ ಜ್ಞಾನ ಇವುಗಳಿಂದ.]

ಸಂಪ್ರಾಪ್ಯೈನಮೃಷಯೋ ಜ್ಞಾನತೃಪ್ತಾಃ
ಕೃತಾತ್ಮಾನೋ ವೀತರಾಗಾಃ ಪ್ರಶಾಂತಾಃ ।
ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾ
ಯುಕ್ತಾತ್ಮಾನಃ ಸರ್ವಮೇವಾವಿಶಂತಿ ॥ ೫ ॥

ಏನಂ=ಈ [ಆತ್ಮನನ್ನು] ಸಂಪ್ರಾಪ್ಯ=ಪಡೆದುಕೊಂಡು : ತಿಳಿದುಕೊಂಡು ಋಷಯಃ=ಋಷಿಗಳು ಜ್ಞಾನತೃಪ್ತಾಃ=ಜ್ಞಾನತೃಪ್ತರೂ ಕೃತಾತ್ಮಾನಃ=ಕೃತಾತ್ಮರೂ ವೀತರಾಗಾಃ=ರಾಗಾದಿದೋಷರಹಿತರೂ ಪ್ರಶಾಂತಾಃ=ಪ್ರಶಾಂತರೂ [ಆಗುವರು]. ತೇ ಧೀರಾಃ=ಆ ವಿವೇಕಿಗಳು ಯುಕ್ತಾತ್ಮಾನಃ=ನಿತ್ಯವೂ ಸಮಾಹಿತ ಸ್ವಭಾವವುಳ್ಳವರಾಗಿ ಸರ್ವಗಂ=ಸರ್ವವ್ಯಾಪಿಯಾದ ಬ್ರಹ್ಮವನ್ನು ಸರ್ವತಃ=ಸರ್ವತ್ರ ಪ್ರಾಪ್ಯ=ಪಡೆದು ಸರ್ವಂ ಏವ=ಸರ್ವವನ್ನೂ ಆವಿಶಂತಿ=ಪ್ರವೇಶಿಸುವರು.

೫. ಈ ಆತ್ಮನನ್ನು ಚೆನ್ನಾಗಿ ತಿಳಿದುಕೊಂಡು ಋಷಿಗಳು ಜ್ಞಾನತೃಪ್ತರೂ[1] ಕೃತಾತ್ಮರೂ[2] ರಾಗಾದಿದೋಷರಹಿತರೂ ಪ್ರಶಾಂತರೂ[3] (ಆಗುವರು). ಆ

ವಿವೇಕಿಗಳು ನಿತ್ಯವೂ ಸಮಾಹಿತಚಿತ್ತರಾದವರಾಗಿ [illegible] ಬ್ರಹ್ಮವನ್ನು ಸರ್ವತ್ರ [illegible] ಪ್ರವೇಶಿಸುವರು.[4]

[[1] ಆ ಜ್ಞಾನದಿಂದಲೇ ತೃಪ್ತರಾಗಿ.
[2] ಪರಮಾತ್ಮಸ್ವರೂಪದಿಂದಲೇ [illegible]
[3] ಉಪಶಾಂತೇಂದ್ರಿಯರಾಗಿ.
[4] ಘಟಾಕಾಶವು ಮಹಾಕಾಶವನ್ನು ಸೇರುವಂತೆ [illegible] ಗಿರುವ ಪರಿಚ್ಛಿನ್ನತೆಯನ್ನು ಬಿಡುತ್ತಾರೆ.]

ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ
ಸಂನ್ಯಾಸಯೋಗಾದ್ಯತಯಃ ಶುದ್ಧಸತ್ತ್ವಾಃ ।
ತೇ ಬ್ರಹ್ಮಲೋಕೇಷು ಪರಾಂತಕಾಲೇ
ಪರಾಮೃತಾಃ ಪರಿಮುಚ್ಯಂತಿ ಸರ್ವೇ ॥ ೬ ॥

ವೇದಾಂತ-ವಿಜ್ಞಾನ-ಸುನಿಶ್ಚಿತಾರ್ಥಾಃ=ವೇದಾಂತ ವಿಜ್ಞಾನದ ಅರ್ಥವನ್ನು ನಿರ್ಧಾರ ಮಾಡಿದವರಾಗಿ ಸಂನ್ಯಾಸಯೋಗಾತ್=ಸಂನ್ಯಾಸಯೋಗದಿಂದ ಶುದ್ಧಸತ್ತ್ವಾಃ=ಶುದ್ಧ ಸತ್ತ್ವವುಳ್ಳವರಾಗಿ ತೇ ಸರ್ವೇ ಯತಯಃ=ಆ ಎಲ್ಲ ಯತಿಗಳು ಬ್ರಹ್ಮಲೋಕೇಷು= ಬ್ರಹ್ಮಲೋಕಗಳಲ್ಲಿ ಪರಾಂತಕಾಲೇ=ಚರಮಕಾಲದಲ್ಲಿ ಪರಾಮೃತಾಃ=ಬ್ರಹ್ಮಭೂತರಾಗಿ ಪರಿಮುಚ್ಯಂತಿ=ಮುಕ್ತರಾಗುವರು.

೬. ವೇದಾಂತವಿಜ್ಞಾನದ ಅರ್ಥವನ್ನು[1] ಚೆನ್ನಾಗಿ ನಿರ್ಧಾರಮಾಡಿದವರಾಗಿ ಸಂನ್ಯಾಸಯೋಗದಿಂದ[2] ಶುದ್ಧಸತ್ತ್ವವುಳ್ಳವರಾಗಿ ಆ ಎಲ್ಲ ಯತಿಗಳು ಬ್ರಹ್ಮಲೋಕಗಳಲ್ಲಿ[3] ಚರಮಕಾಲದಲ್ಲಿ[4] ಬ್ರಹ್ಮಭೂತರಾಗಿ ಮುಕ್ತರಾಗುವರು.

[[1] ಜ್ಞೇಯನಾದ ಪರಮಾತ್ಮನು ವೇದಾಂತವಿಜ್ಞಾನದ ಅರ್ಥ.
[2] ಕೇವಲ ಬ್ರಹ್ಮನಿಷ್ಠ ಸ್ವರೂಪವಾದ ಯೋಗದಿಂದ.
[3] ಎಂದರೆ ಬ್ರಹ್ಮದಲ್ಲಿ; ಸಾಧಕರು ಅನೇಕರಾಗಿರುವುದರಿಂದ ಬ್ರಹ್ಮವೆಂಬ ಲೋಕವು ಒಂದೇ ಆದರೂ ಅನೇಕವಾಗಿರುವಂತೆ ಕಾಣುತ್ತದೆ ಅಥವಾ ಹೊಂದಲ್ಪಡುತ್ತದೆ. ಆದುದರಿಂದ ಬಹುವಚನ ಪ್ರಯೋಗ.
[4] ದೇಹಪರಿತ್ಯಾಗಕಾಲದಲ್ಲಿ : ಸಂಸಾರಿಗಳ ಮರಣಕಾಲಗಳು ಅಪರಾಂತಗಳಾದರೆ (ಕೊನೆಯಿಲ್ಲದವುಗಳಾದರೆ) ಮುಮುಕ್ಷುಗಳ ದೇಹಪರಿತ್ಯಾಗ ಕಾಲವು ಪರಾಂತ ವಾದುದು (ಕೊನೆಯುಳ್ಳದ್ದು).]

ಗತಾಃ ಕಲಾಃ ಪಂಚದಶ ಪ್ರತಿಷ್ಠಾ
ದೇವಾಶ್ಚ ಸರ್ವೇ ಪ್ರತಿ ದೇವತಾಸು ।
ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ
ಪರೇಽವ್ಯಯೇ ಸರ್ವ ಏಕೀಭವಂತಿ ॥ ೭ ॥

ಪಂಚದಶ ಕಲಾಃ=ಹದಿನೈದು ಕಲೆಗಳು ಪ್ರತಿಷ್ಠಾಃ=ತಮ್ಮ ಕಾರಣಗಳನ್ನು ಗತಾಃ=ಸೇರುತ್ತವೆ; ಸರ್ವೇ ದೇವಾಃ=ದೇವತೆಗಳೆಲ್ಲರೂ ಪ್ರತಿದೇವತಾಸು=ಪ್ರತಿದೇವತೆಗಳಲ್ಲಿ [ಗತಾಃ ಭವಂತಿ=ಸೇರುತ್ತಾರೆ.] ಕರ್ಮಾಣಿ=ಕರ್ಮಗಳು ಚ=ಮತ್ತು ವಿಜ್ಞಾನಮಯಃ ಆತ್ಮಾ=ವಿಜ್ಞಾನಮಯವಾದ ಆತ್ಮನು ಸರ್ವೇ=ಎಲ್ಲವೂ ಪರೇ ಅವ್ಯಯೇ=ಅವ್ಯಯನಾದ ಪರಬ್ರಹ್ಮದಲ್ಲಿ ಏಕೀಭವಂತಿ=ಒಂದಾಗುವುವು.

೭. (ಮೋಕ್ಷಕಾಲದಲ್ಲಿ) ಹದಿನೈದು ಕಲೆಗಳು[1] ತಮ್ಮ ಕಾರಣಗಳನ್ನು ಸೇರುತ್ತವೆ: ದೇವತೆಗಳೆಲ್ಲರೂ[2] ಪ್ರತಿದೇವತೆಗಳನ್ನು[3] (ಸೇರುತ್ತಾರೆ). (ಅವರ) ಕರ್ಮಗಳು[4], ವಿಜ್ಞಾನಮಯನಾದ[5] ಆತ್ಮನು—ಎಲ್ಲವೂ ಅವ್ಯಯನಾದ ಪರಬ್ರಹ್ಮದಲ್ಲಿ ಒಂದಾಗುವುವು.

[1 ದೇಹಾರಂಭಕವಾದ ಪ್ರಾಣವೇ ಮೊದಲಾದ ಹದಿನೈದು ಕಲೆಗಳು. ಪ್ರಶ್ನೋಪನಿಷತ್ತನ್ನು (೬.೪.೧) ನೋಡಿ.

2 ದೇಹವನ್ನು ಆಶ್ರಯಿಸಿಕೊಂಡು ಚಕ್ಷುರಾದಿಕರಣಗಳಲ್ಲಿರುವ ಅಧಿಷ್ಠಾನದೇವತೆಗಳು.

3 ಸೂರ್ಯಾದಿದೇವತೆಗಳನ್ನು.

4 ಫಲವನ್ನು ಕೊಡಲು ಪ್ರವೃತ್ತವಾಗದ ಕರ್ಮಗಳು.

5 ಅವಿದ್ಯಾಕೃತವಾದ ಬುದ್ಧಿಯೇ ಮೊದಲಾದ ಉಪಾಧಿಯನ್ನು ಆತ್ಮವಾಗಿ ಹೊಂದಿರುವ.]

ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ-
ಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ ।
ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ
ಪರಾತ್ ಪರಂ ಪುರುಷಮುಪೈತಿ ದಿವ್ಯಮ್ ॥ ೮ ॥

ಯಥಾ=ಹೇಗೆ ಸ್ಯಂದಮಾನಾಃ=ಹರಿಯುತ್ತಿರುವ ನದ್ಯಃ=ನದಿಗಳು ನಾಮರೂಪೇ=ನಾಮರೂಪಗಳನ್ನು ವಿಹಾಯ=ಬಿಟ್ಟು ಸಮುದ್ರೇ=ಸಮುದ್ರದಲ್ಲಿ ಅಸ್ತಂಗಚ್ಛಂತಿ=ಅದೃಶ್ಯವಾಗುವುವೋ ತಥಾ=ಹಾಗೆಯೇ ವಿದ್ವಾನ್=ವಿದ್ವಾಂಸನು ನಾಮರೂಪಾತ್=ನಾಮರೂಪಗಳಿಂದ ವಿಮುಕ್ತಃ=ಬಿಡುಗಡೆ ಹೊಂದಿ ಪರಾತ್ ಪರಂ=ಪರಾತ್ಪರನಾದ ಪುರುಷಂ=ಪುರುಷನನ್ನು ಉಪೈತಿ=ಹೊಂದುವನು.

೮. ಹೇಗೆ ಹರಿಯುತ್ತಿರುವ ನದಿಗಳು ನಾಮರೂಪಗಳನ್ನು ಬಿಟ್ಟು ಸಮುದ್ರದಲ್ಲಿ ಅದೃಶ್ಯವಾಗುವುವೋ[1] ಹಾಗೆಯೇ ವಿದ್ವಾಂಸನು ನಾಮರೂಪಗಳಿಂದ ಬಿಡುಗಡೆಯನ್ನು ಹೊಂದಿ ಪರಾತ್ಪರನಾದ[2] ದಿವ್ಯನಾದ ಆ ಪುರುಷನನ್ನು ಹೊಂದುತ್ತಾನೆ.

[[1] ಅಪರೋಕ್ಷಭಾವವನ್ನು ಹೊಂದುವುವೋ.
[2] ಹಿಂದೆ ಹೇಳಿದ ಶ್ರೇಷ್ಠವಾದ ಅಕ್ಷರಕ್ಕಿಂತ ಶ್ರೇಷ್ಠನಾದ.]

ಸ ಯೋ ಹ ವೈ ತತ್ ಪರಮಂ ಬ್ರಹ್ಮ ವೇದ
ಬ್ರಹ್ಮೈವ ಭವತಿ ನಾಸ್ಯಾಬ್ರಹ್ಮವಿತ್ ಕುಲೇ ಭವತಿ ।
ತರತಿ ಶೋಕಂ ತರತಿ ಪಾಪ್ಮಾನಂ
ಗುಹಾಗ್ರಂಥಿಭ್ಯೋ ವಿಮುಕ್ತೋಽಮೃತೋ ಭವತಿ ॥ ೯ ॥

ಯಃ ಹ ವೈ=ಯಾವನು ತತ್=ಆ ಪರಮಂ ಬ್ರಹ್ಮ=ಪರಮಬ್ರಹ್ಮವನ್ನು ವೇದ= ತಿಳಿದುಕೊಳ್ಳುವನೋ ಸಃ=ಅವನು ಬ್ರಹ್ಮ ಏವ=ಬ್ರಹ್ಮವೇ ಭವತಿ=ಆಗುವನು. ಅಸ್ಯ=ಇವನ ಕುಲೇ=ಕುಲದಲ್ಲಿ ಅಬ್ರಹ್ಮವಿತ್=ಬ್ರಹ್ಮವನ್ನು ಅರಿಯದವನು ನ ಭವತಿ= ಹುಟ್ಟುವುದಿಲ್ಲ. [ಇವನು] ಶೋಕಂ=ಶೋಕವನ್ನು ತರತಿ=ದಾಟುತ್ತಾನೆ. ಪಾಪ್ಮಾನಂ= ಪಾಪವನ್ನು ತರತಿ=ದಾಟುತ್ತಾನೆ.ಗುಹಾಗ್ರಂಥಿಭ್ಯಃ=ಹೃದಯಗ್ರಂಥಿಗಳಿಂದ ವಿಮುಕ್ತಃ= ಬಿಡುಗಡೆ ಹೊಂದಿದವನಾಗಿ ಅಮೃತಃ ಭವತಿ=ಅಮೃತನಾಗುವನು.

೯. ಯಾವನು ಆ ಪರಮಬ್ರಹ್ಮವನ್ನು ತಿಳಿದುಕೊಳ್ಳುವನೋ ಅವನು ಬ್ರಹ್ಮವೇ ಆಗುವನು. ಇವನ ಕುಲದಲ್ಲಿ ಬ್ರಹ್ಮವನ್ನು ಅರಿಯದವನು ಹುಟ್ಟುವುದಿಲ್ಲ. (ಇವನು) ಶೋಕವನ್ನು ದಾಟುತ್ತಾನೆ, ಪಾಪವನ್ನು ದಾಟುತ್ತಾನೆ. ಹೃದಯಗ್ರಂಥಿಗಳಿಂದ ಬಿಡುಗಡೆ ಹೊಂದಿ ಅಮೃತನಾಗುವನು.

ತದೇತದೃಚಾಭ್ಯುಕ್ತಮ್—
ಕ್ರಿಯಾವಂತಃ ಶ್ರೋತ್ರಿಯಾ ಬ್ರಹ್ಮನಿಷ್ಠಾಃ
ಸ್ವಯಂ ಜುಹ್ವತ ಏಕರ್ಷಿಂ ಶ್ರದ್ಧಯಂತಃ ।
ತೇಷಾಮೇವೈತಾಂ ಬ್ರಹ್ಮವಿದ್ಯಾಂ ವದೇತ
ಶಿರೋವ್ರತಂ ವಿಧಿವದ್ಯೈಸ್ತು ಚೀರ್ಣಮ್ ॥ ೧೦ ॥

ತತ್ ಏತತ್=ಆ ಇದು ಋಚಾ=ಋಕ್ಕಿನಿಂದ ಅಭ್ಯುಕ್ತಂ=ಹೇಳಲ್ಪಟ್ಟಿದೆ—ಯೇ=ಯಾರು ಕ್ರಿಯಾವಂತಃ=ಕ್ರಿಯಾವಂತರೊ ಶ್ರೋತ್ರಿಯಾಃ=ಶ್ರೋತ್ರಿಯರೊ ಬ್ರಹ್ಮನಿಷ್ಠಾಃ=ಬ್ರಹ್ಮನಿಷ್ಠರೊ ಶ್ರದ್ಧಯಂತಃ=ಶ್ರದ್ಧೆಯುಳ್ಳವರಾಗಿ ಸ್ವಯಂ=ತಾವೇ ಏಕರ್ಷಿಂ=ಏಕರ್ಷಿ ಎಂಬ ಅಗ್ನಿಯಲ್ಲಿ ಜುಹ್ವತೇ=ಹೋಮಮಾಡುವರೊ. ಯೈಃ ತು=ಯಾರಿಂದ ಶಿರೋವ್ರತಂ=ಶಿರೋವ್ರತವು ವಿಧಿವತ್=ವಿಧಿವತ್ತಾಗಿ ಚೀರ್ಣಂ=ಆಚರಿಸಲ್ಪಟ್ಟಿದೆಯೊ ತೇಷಾಂ ಏವ=ಅವರಿಗೆ[5] ಬ್ರಹ್ಮವಿದ್ಯಾಂ=ಬ್ರಹ್ಮವಿದ್ಯೆಯನ್ನು ವದೇತ=ಉಪದೇಶಿಸಬೇಕು.

೧೦. ಆ ಇದು[1] ಋಕ್ಕಿನಿಂದ ಹೇಳಲ್ಪಟ್ಟಿದೆ: (ಯಾರು) ಕ್ರಿಯಾವಂತರೊ,[2] ಶ್ರೋತ್ರಿಯರೊ, ಬ್ರಹ್ಮನಿಷ್ಠರೊ,[3] ಶ್ರದ್ಧೆಯುಳ್ಳವರಾಗಿ ತಾವೇ ಏಕರ್ಷಿ ಎಂಬ ಅಗ್ನಿಯಲ್ಲಿ ಹೋಮಮಾಡುವರೊ, ಯಾರಿಂದ ಶಿರೋವ್ರತವು[4] ವಿಧಿವತ್ತಾಗಿ ಆಚರಿಸಲ್ಪಟ್ಟಿರುವುದೊ ಅವರಿಗೆ[5] ಈ ಬ್ರಹ್ಮವಿದ್ಯೆಯನ್ನು ಉಪದೇಶಿಸಬೇಕು.

[[1] ಬ್ರಹ್ಮವಿದ್ಯಾಸಂಪ್ರದಾನವಿಧಿ.

[2] ಶಾಸ್ತ್ರೋಕ್ತವಾಗಿ ಕರ್ಮಾನುಷ್ಠಾನ ಮಾಡುವವರು.

[3] ಅಪರಬ್ರಹ್ಮದಲ್ಲಿ ಅಭಿಯುಕ್ತರಾಗಿ ಪರಬ್ರಹ್ಮವನ್ನು ತಿಳಿಯುವ ಇಚ್ಛೆಯುಳ್ಳವರು.

[4] ಅಥರ್ವಣಶಾಖೆಯುವರ ವೇದವ್ರತ ; ಈ ವ್ರತದಲ್ಲಿ ಅಗ್ನಿಯನ್ನು ತಲೆಯ ಮೇಲೆ ಧರಿಸಬೇಕು.

[5] ಸಂಸ್ಕಾರವನ್ನು ಹೊಂದಿದ ಅಂತಃಕರಣವುಳ್ಳವರಾಗಿ ಪಾತ್ರರಾದವರಿಗೆ.]

ತದೇತತ್ ಸತ್ಯಮೃಷಿರಂಗಿರಾಃ ಪುರೋವಾಚ
ನೈತದಚೀರ್ಣವ್ರತೋಽಧೀತೇ ।
ನಮಃ ಪರಮಋಷಿಭ್ಯೋ
ನಮಃ ಪರಮಋಷಿಭ್ಯಃ ॥ ೧೧ ॥

ತತ್ ಏತತ್=ಆ ಈ ಸತ್ಯಂ=ಸತ್ಯವನ್ನು ಪುರಾ=ಪೂರ್ವದಲ್ಲಿ ಅಂಗಿರಾಃ ಋಷಿಃ=ಅಂಗಿರಸ್ ಎಂಬ ಋಷಿಯು ಉವಾಚ=ಹೇಳಿದನು. ಅಚೀರ್ಣವ್ರತಃ=ವ್ರತವನ್ನು ಆಚರಿಸದವನು ಏತತ್=ಇದನ್ನು ನ ಅಧೀತೇ=ಅಧ್ಯಯನ ಮಾಡುವುದಿಲ್ಲ. ಪರಮಋಷಿಭ್ಯಃ ನಮಃ=ಪರಮಋಷಿಗಳಿಗೆ ನಮಸ್ಕಾರ. ಪರಮಋಷಿಭ್ಯಃ ನಮಃ=ಪರಮಋಷಿಗಳಿಗೆ ನಮಸ್ಕಾರ.

೧೧. ಆ ಈ ಸತ್ಯವನ್ನು[1] ಅಂಗಿರಸ್ ಎಂಬ ಋಷಿಯು ಪೂರ್ವದಲ್ಲಿ (ಶೌನಕನಿಗೆ) ಹೇಳಿದನು.[2] ವ್ರತವನ್ನು ಆಚರಿಸದೆ ಇರುವವನು ಇದನ್ನು[3]

ಅಧ್ಯಯನಮಾಡಕೂಡದು.[1] ಪರಮ ಋಷಿಗಳಿಗೆ ನಮಸ್ಕಾರ. ಪರಮಋಷಿಗಳಿಗೆ ನಮಸ್ಕಾರ.

[[1] ಅಕ್ಷರಪ್ರಮಾಣವಿಲ್ಲ ಸತ್ಯವೇ.

[2] [illegible]

[3] ಗ್ರಂಥಮುಗಿದುದರ ಈ ಸೂಚನೆ.

[4] [illegible]]

ಮಂತ್ರಗಳ ಅಕಾರಾದಿಸೂಚಿ

	ಮುಂ.	ಖಂ.	ಶ್ಲೋ.	ಪುಟ
ಅಗ್ನಿರ್ಮೂರ್ಧಾ	೨	೧	೪	೨೪
ಅತಃ ಸಮುದ್ರಾ	೨	೧	೯	೨೮
ಅಥರ್ವಣೇ ಯಾಂ	೧	೧	೨	೮
ಅರಾ ಇವ	೨	೨	೬	೩೩
ಅವಿದ್ಯಾಯಾಮಂತರೇ	೧	೨	೮	೧೮
ಅವಿದ್ಯಾಯಾಂ ಬಹುಧಾ	೧	೨	೯	೧೯
ಆವಿಃ ಸಂನಿಹಿತಂ	೨	೨	೧	೩೦
ಇಷ್ಟಾಪೂರ್ತಂ ಮನ್ಯಮಾನಾ	೧	೨	೧೦	೧೯
ಏತಸ್ಮಾಜ್ಜಾಯತೇ	೨	೧	೩	೨೪
ಏತೇಷು ಯಶ್ಚರತೇ	೧	೨	೫	೧೬
ಏಷೋಽಣುರಾತ್ಮಾ	೩	೧	೯	೪೫
ಏಹ್ಯೇಹೀತಿ	೧	೨	೬	೧೭
ಕಾಮಾನ್ ಯಃ	೩	೨	೨	೪೭
ಕಾಲೀ ಕರಾಲೀ	೧	೨	೪	೧೬
ಗತಾಃ ಕಲಾಃ	೩	೨	೭	೫೧
ತತ್ರಾಪರಾ	೧	೧	೫	೯
ತದೇತತ್ ಸತ್ಯಂ ಯಥಾ	೨	೧	೧	೨೩
ತದೇತತ್ ಸತ್ಯಮೃಷಿಃ	೩	೨	೧	೫೩
ತದೇತತ್ ಸತ್ಯಂ ಮಂತ್ರೇಷು	೧	೨	೧	೧೪
ತದೇತದೃಚಾಭ್ಯುಕ್ತಂ	೩	೨	೧೦	೫೨
ತಪಸಾ ಚೀಯತೇ	೧	೧	೮	೧೧
ತಪಃಶ್ರದ್ಧೇಯೇ	೧	೨	೧೧	೨೦
ತಸ್ಮಾಚ್ಚ ದೇವಾ	೨	೧	೭	೨೭
ತಸ್ಮಾದಗ್ನಿಃ	೨	೧	೫	೨೫
ತಸ್ಮಾದೃಚಃ	೨	೧	೬	೨೬
ತಸ್ಮೈ ಸ ವಿದ್ವಾನ್	೧	೨	೧೩	೨೨
ತಸ್ಮೈ ಸ ಹೋವಾಚ	೧	೧	೪	೯
ದಿವ್ಯೋ ಹ ಮೂರ್ತಃ	೨	೧	೨	೨೪
ದ್ವಾ ಸುಪರ್ಣಾ	೩	೧	೧	೩೮
ಧನುರ್ಗೃಹೀತ್ವೌಪನಿಷದಂ	೨	೨	೩	೩೧
ನ ಚಕ್ಷುಷಾ	೩	೧	೮	೪೪

	ಮುಂ.	ಖಂ.	ಶ್ಲೋ.	ಪುಟ
ನ ತತ್ರ ಸೂರ್ಯೋ	೨	೨	೧೧	೩೬
ನಾಯಮಾತ್ಮಾ ಪ್ರವಚನೇನ	೩	೨	೩	೪೮
ನಾಯಮಾತ್ಮಾ ಬಲಹೀನೇನ	೩	೨	೪	೪೯
ಪರೀಕ್ಷ್ಯ ಲೋಕಾನ್	೧	೨	೧೨	೨೧
ಪುರುಷ ಏವೇದಂ	೨	೧	೧೦	೨೯
ಪ್ಲವಾಹ್ಯೇತೇ	೧	೨	೭	೧೨
ಪ್ರಣವೋ ಧನುಃ	೨	೨	೪	೩೨
ಪ್ರಾಣೋಹ್ಯೇಷ	೩	೧	೪	೪೦
ಬೃಹಚ್ಚ ತದ್ದಿವ್ಯಂ	೩	೧	೭	೪೩
ಬ್ರಹ್ಮಾ ದೇವಾನಾಂ	೧	೧	೧	೭
ಬ್ರಹ್ಮೈವೇದಂ	೨	೨	೧೨	೩೭
ಭಿದ್ಯತೇ ಹೃದಯಗ್ರಂಥಿಃ	೨	೨	೯	೩೫
ಮನೋಮಯಃ ಪ್ರಾಣಶರೀರನೇತಾ	೨	೨	೮	೩೪
ಯತ್ತದದ್ರೇಶ್ಯಂ	೧	೧	೬	೧೦
ಯಥಾ ನದ್ಯಃ	೩	೨	೮	೫೦
ಯಥೋರ್ಣನಾಭಿಃ	೧	೧	೭	೧೧
ಯದರ್ಚಿಮತ್	೨	೨	೨	೩೦
ಯದಾ ಪಶ್ಯಃ	೩	೧	೩	೪೦
ಯದಾ ಲೇಲಾಯತೇ	೧	೨	೨	೧೪
ಯಂ ಯಂ ಲೋಕಂ	೩	೧	೧೦	೪೫
ಯಃ ಸರ್ವಜ್ಞಃ	೧	೧	೯	೧೨
ಯಃ ಸರ್ವಜ್ಞಃ	೨	೨	೭	೩೪
ಯಸ್ಮಿನ್ ದ್ಯೌಃ	೨	೨	೫	೩೨
ಯಸ್ಯಾಗ್ನಿಹೋತ್ರಂ	೧	೨	೩	೧೫
ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ	೩	೨	೬	೫೦
ಶೌನಕೋ ಹ ವೈ	೧	೧	೩	೮
ಸತ್ಯಮೇವ ಜಯತೇ	೩	೧	೬	೪೨
ಸತ್ಯೇನ ಲಭ್ಯಸ್ತಪಸಾ	೩	೧	೫	೪೦
ಸಪ್ತ ಪ್ರಾಣಾಃ	೨	೧	೮	೨೮
ಸಮಾನೇ ವೃಕ್ಷೇ	೩	೧	೨	೩೯
ಸಂಪ್ರಾಪ್ಯೈನಂ	೩	೨	೫	೪೯
ಸ ಯೋ ಹ ವೈ	೩	೨	೯	೫೨
ಸ ವೇದೈತತ್	೩	೨	೧	೪೭
ಹಿರಣ್ಮಯೇ ಪರೇ ಕೋಶೇ	೨	೨	೧೦	೩೬

ಪ್ರಸ್ಥಾನತ್ರಯ

ಮೂಲ ಪ್ರತಿಪದಾರ್ಥ ತಾತ್ಪರ್ಯ ಟಿಪ್ಪಣಿಗಳೊಡನೆ

ಈಶಾವಾಸ್ಯೋಪನಿಷತ್	2-50
ಕೇನೋಪನಿಷತ್	4-00
ಕಠೋಪನಿಷತ್	6-00
ಪ್ರಶ್ನೋಪನಿಷತ್	6-00
ಮುಂಡಕೋಪನಿಷತ್	7-00
ಮಾಂಡೂಕ್ಯೋಪನಿಷತ್	5-00
ಐತರೇಯೋಪನಿಷತ್	1-50
ತೈತ್ತಿರೀಯೋಪನಿಷತ್	9-00
ಬೃಹದಾರಣ್ಯಕೋಪನಿಷತ್	50-00
ಛಾಂದೋಗ್ಯೋಪನಿಷತ್	45-00
ಶ್ವೇತಾಶ್ವತರೋಪನಿಷತ್	7-50
ಭಗವದ್ಗೀತೆ	27-00
ಬ್ರಹ್ಮಸೂತ್ರಗಳು	100-00

SRI RAMAKRISHNA ASHRAMA : YADAVAGIRI : MYSORE

MUNDAKOPANISHAT **Price: Rs. 7/-**